# ಘಟಕ ೧೨

# ಅಂತರ್ಜಾಲ ಹಾಗೂ ಸಾಮಾಜಿಕ ಜಾಲ ವ್ಯವಸ್ಥೆ

## ಹಿನ್ನೆಲೆ

ಗಣಕ ಯಂತ್ರಗಳ ಆವಿಷ್ಕಾರವು ಅಂತರ್ಜಾಲ, ತಂತ್ರಾಂಶ, ಯುನಿಕೋಡ್, ಸಾಮಾಜಿಕ ಸಂವಹನ ಹಾಗೂ ಬ್ಲಾಗ್ ಮತ್ತು ಅಂಕಣ ಬರಹಗಳ ಉಗಮಕ್ಕೆ ದಾರಿ ಮಾಡಿ ಕಳೆದ ಕೆಲವು ದಶಕಗಳಲ್ಲಿ ನಿಧಾನವಾಗಿ ಭಾಷೆಗಳ ಬಳಕೆ, ಉಪಯೋಗ ಹಾಗೂ ಸಂವಹನ ಮಾಧ್ಯಮದಲ್ಲಿ ಕ್ರಾಂತಿಕಾರಕ ಬೆಳವಣಿಗೆಗಳನ್ನು ತಂದಿದೆ. ಮೇಲಿನ ಬೆಳವಣಿಗೆಗಳು ಸಂವಹನದ ಸಾಧ್ಯತೆ, ಅನುವಾದ, ಸಂಪರ್ಕ ಹಾಗೂ ಸಾಮಾಜಿಕ ನಡುವಳಿಕೆಗಳಲ್ಲಿ ಮೂಲಭೂತ ಬದಲಾವಣೆಗಳನ್ನು ಉಂಟುಮಾಡಿವೆ. ಎಲ್ಲಕ್ಕಿಂತ ಮಿಗಿಲಾಗಿ ಆರಂಭಿಕವಾಗಿ ಕೇವಲ ಇಂಗ್ಲಿಷ್ ಹಾಗೂ ಯೂರೋಪಿನ ಭಾಷೆಗಳಿಗಷ್ಟೇ ಸೀಮಿತವಾಗಿದ್ದ ಈ ಬೆಳವಣಿಗೆಗಳು ಜಗತ್ತಿನ ಎಲ್ಲ ಭಾಷೆಗಳಿಗೂ ಹಬ್ಬಿ ಭಾಷಾ ಸಂಗೋಪನೆಯಲ್ಲಿ ಬೆಂಬಲವಾಗಿ ನಿಂತಿವೆಯಲ್ಲದೆ ಹೊಸಹೊಸ ಭಾಷಿಕ ಶೈಲಿಗಳು ಬೆಳೆಯಲು ಅನುವು ಮಾಡಿಕೊಟ್ಟಿವೆ. ಇವುಗಳ ವ್ಯಾಪಕ ಬಳಕೆಯ ಪರಿಣಾಮವಾಗಿ ಪರಂಪರಾನುಗತವಾಗಿ ಉಳಿದುಬಂದಿದ್ದ ತರತಮ ಭೇದಗಳು, ಕರಿಯ–ಬಿಳಿಯ, ಉಚ್ಚ–ನೀಚ, ಗಂಡು–ಹೆಣ್ಣು, ನಗರ–ಹಳ್ಳಿ, ಹಿರಿಯ–ಕಿರಿಯ ಮುಂತಾದವು, ಗಮನಾರ್ಹವಾಗಿ ಇಳಿಮುಖವಾಗುತ್ತಿವೆ. ತಾಂತ್ರಿಕತೆ ಹಾಗೂ ಸುಲಭವಾಗಿ ಉಪಲಬ್ಧತೆ ಇಲ್ಲದಿರುವ ಕಾರಣದಿಂದ ಇವುಗಳ ಉಪಯೋಗಕ್ಕೆ ಎಲ್ಲರಿಗೂ ಸಮಾನ ಅವಕಾಶಗಳು ಸಿಗುವುದು ಕಷ್ಟ ಎಂಬುದು ನಿಜವಾದರೂ ಅವು ಸಮಾಜದ ಮೇಲೆ ತರಲು ಸಾಧ್ಯವಾಗಿರುವ ಸಾಮಾಜಿಕ ಒತ್ತಡಗಳ ಪರಿಣಾಮ ನಿರ್ಣಾಯಕವಾದುದು. ಪ್ರಸ್ತುತ ಘಟಕ ಐದು ಅಂಶಗಳ ಪರಿಚಯವನ್ನು ಮಾಡಿಕೊಡುತ್ತದೆ: ೧. ಅಂತರ್ಜಾಲ, ೨. ತಂತ್ರಾಂಶ, ೩. ಯುನಿಕೋಡ್ ಮತ್ತು ಕನ್ನಡ, ೪. ಸಾಮಾಜಿಕ ಸಂವಹನ ಹಾಗೂ ೫. ಬ್ಲಾಗ್ ಮತ್ತು ಅಂಕಣ ಬರಹ.

**ವಿಷಯಾನುಕ್ರಮಣಿಕೆ**


೧೨.೦. ಉದ್ದೇಶ

೧೨.೧. ಪೀಠಿಕೆ

೧೨.೨. ಅಂತರ್ಜಾಲ

೧೨.೩. ತಂತ್ರಾಂಶ (ಪದ ಸಂಸ್ಕರಣ)

೧೨.೪. ಯುನಿಕೋಡ್ ಮತ್ತು ಕನ್ನಡ

೧೨.೫. ಸಾಮಾಜಿಕ ಸಂವಹನ
೧೨.೬. ಬ್ಲಾಗ್ ಮತ್ತು ಅಂಕಣ ಬರಹ
೧೨.೭. ಸಾರಾಂಶ
ಅಭ್ಯಾಸಗಳಿಗೆ ಉತ್ತರಗಳು
೧೨.೮. ಮುಂದಿನ ಓದಿಗಾಗಿ ಮತ್ತು ಆಕರ ಗ್ರಂಥಗಳು

## ೧೨.೦. ಉದ್ದೇಶ

೧. ಈ ಘಟಕವನ್ನು ಓದುವುದರಿಂದ ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೆಲವು ವಿಷಯಗಳ ಬಗೆಗೆ ನಿಮಗೆ ತಿಳಿಯುತ್ತದೆ.

೨. ಕನ್ನಡ ಭಾಷೆಯ ಅಭಿವೃದ್ಧಿಗೆ ಗಣಕ ತಂತ್ರಜ್ಞಾನದ ಅವಶ್ಯಕತೆಯ ಪರಿಚಯವಾಗುತ್ತದೆ.

೩. ಅಂತರ್ಜಾಲ, ಪದಸಂಸ್ಕಾರ, ಯುನಿಕೋಡ್ ಮತ್ತು ಬ್ಲಾಗ್‌ಗಳ ಮೂಲಕ ಕನ್ನಡ ಭಾಷೆಯ ಬೆಳವಣಿಗೆಯ ವಿಷಯ ನಿಮಗೆ ಮನವರಿಕೆ ಆಗುತ್ತದೆ.

೪. ಮಾಹಿತಿ ತಂತ್ರಜ್ಞಾನದ ಸವಲತ್ತುಗಳು ಕನ್ನಡ ಭಾಷೆ–ಸಾಹಿತ್ಯದ ತಿಳಿವಳಿಕೆಗೆ ಯಾವ ರೀತಿ ಪೂರಕವಾಗಿವೆ ಎಂಬುದರ ಕಲ್ಪನೆ ನಿಮಗೆ ಆಗುತ್ತದೆ.

## ೧೨.೧. ಪೀಠಿಕೆ

### ೧೨.೧.೧. ತಂತ್ರಜ್ಞಾನದ ಮಹತ್ವ

ಕಂಪ್ಯೂಟರ್ (ಗಣಕಯಂತ್ರ) ಮತ್ತು ಅಂತರ್ಜಾಲ ಎನ್ನುವ ಪದಗಳನ್ನು ನಾವೆಲ್ಲರೂ ದಿನ ನಿತ್ಯದಲ್ಲಿ ಕೇಳಿಯೇ ಇರುತ್ತೇವೆ. ಯಾವುದೋ ಒಂದು ಖಾಸಗಿ / ಸರಕಾರಿ ಕೆಲಸಕ್ಕೆ ಬೇಕಾಗುವ ದಾಖಲೆಗಳನ್ನು ಮುದ್ರಣ ರೂಪದಲ್ಲಿ ಪಡೆಯುವುದರಿಂದ ಹಿಡಿದು ಚಲನಚಿತ್ರ ನೋಡುವ, ವಿವಿಧ ಆಟಗಳನ್ನು ಆಡುವ, ಬೇಕಾದ ಮಾಹಿತಿಗಳನ್ನು ಪ್ರಪಂಚದ ಹೆಚ್ಚೂ–ಕಡಿಮೆ ಯಾವುದೇ ಭಾಷೆಯಲ್ಲಿ ಪಡೆಯುವುದರ ವರೆಗೆ ಎಲ್ಲಾ ಕೆಲಸಕ್ಕೂ ಗಣಕಯಂತ್ರ ಮತ್ತು ಅಂತರ್ಜಾಲವನ್ನು ಇಂದು ಅನಿವಾರ್ಯವಾಗಿ ಅವಲಂಬಿಸಿದ್ದೇವೆ. ಯಾರಿಗೆ ಇಷ್ಟವಾಗಲಿ ಬಿಡಲಿ ಇಂದು ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಕಂಪ್ಯೂಟರ್ ಮತ್ತು ಅಂತರ್ಜಾಲ ಎಲ್ಲರ ಜೀವನದ ಮೇಲೂ ಕೃಷಿ, ಸಾರಿಗೆ, ಮನರಂಜನೆಯಿಂದ ಹಿಡಿದು ಅಂತರಿಕ್ಷ ವಿಜ್ಞಾನದವರೆಗೂ, ಬಳಕೆ ಮತ್ತು ಪ್ರಭಾವ ಹೊಂದಿದೆ. ತಂತ್ರಜ್ಞಾನದ ಅನ್ವಯದಿಂದಾಗಿ ನಮ್ಮ ಜೀವನಮಟ್ಟ ಸುಧಾರಿಸಿದೆ. ನಮ್ಮ ಅಗತ್ಯತೆಗಳು ಸುಲಭವಾಗಿ ಪೂರ್ಣಗೊಳ್ಳುತ್ತಿವೆ. ತಂತ್ರಜ್ಞಾನವು ಕೃಷಿಯಲ್ಲಿ ಪ್ರಗತಿಯನ್ನು ತಂದಿದೆ, ಇದರಿಂದಾಗಿ ಆಹಾರ ಉತ್ಪನ್ನ ಹೆಚ್ಚಾಗಿದೆ. ಎಂಜಿನಿಯರಿಂಗ್ ಮತ್ತು ವಾಸ್ತುಶಿಲ್ಪದ ಬೆಳವಣಿಗೆಗಳ ಕಾರಣದಿಂದ, ದೃಢವಾದ ಕಟ್ಟಡಗಳ ರಚನೆಗಳನ್ನು ನಿರ್ಮಿಸುವುದು ಸಾಧ್ಯವಾಗಿದೆ. ತಂತ್ರಜ್ಞಾನವು ಪ್ರತಿ ಉದ್ಯಮದಲ್ಲೂ ಸಹಕರಿಸಿದೆ. ವ್ಯಾಪಾರಗಳು ಹೆಚ್ಚಾಗಿದ್ದು, ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿವೆ. ತಂತ್ರಜ್ಞಾನದಲ್ಲಿನ ಪ್ರಗತಿಗಳು ಹೊಸ ಮತ್ತು ವೇಗವಾಗಿ ಚಲಿಸುವ ಸಾರಿಗೆ ಮತ್ತು ಸಂವಹನದ ವಿಕಾಸಕ್ಕೆ ಕಾರಣವಾಗಿವೆ. ತಂತ್ರಜ್ಞಾನದ ಅನ್ವಯವು ತಳಿಶಾಸ್ತ್ರದಿಂದ ಬಾಹ್ಯಾಕಾಶದವರೆಗೆ ಸಂಶೋಧನೆಗಳನ್ನು ಹೆಚ್ಚಿಸಿದೆ. ಕಂಪ್ಯೂಟರ್

ಮತ್ತು ಇಂಟರ್‌ನೆಟ್ ತಂತ್ರಜ್ಞಾನಗಳು ಸರ್ವತ್ರವಾಗಿವೆ. ಔಷಧ, ಪ್ರವಾಸೋದ್ಯಮ, ಶಿಕ್ಷಣ, ಮನರಂಜನೆ, ಹೀಗೆ ಪ್ರತಿ ವಲಯದಲ್ಲೂ ಬದಲಾವಣೆಯನ್ನು ತರುತ್ತಿದೆ. ತಂತ್ರಜ್ಞಾನವು ಜೀವನದ ಪ್ರತಿ ಮಗ್ಗುಲನ್ನೂ ಸುಲಭ, ಉತ್ತಮ ಮತ್ತು ವಿಭಿನ್ನವಾಗಿಸಿದೆ. ಅಕ್ಷರಾಭ್ಯಾಸವಿಲ್ಲದವನು ಅವಿದ್ಯಾವಂತ ಎಂದೆನಿಸಿಕೊಳ್ಳುತ್ತಿದ್ದ ಕಾಲ ಮುಗಿಯಿತು. ಈಗ ಗಣಕ ಮತ್ತು ಅಂತರ್ಜಾಲ ಗೊತ್ತಿಲ್ಲದವನು ಅವಿದ್ಯಾವಂತ ಎಂದು ಕರೆಯಿಸಿಕೊಳ್ಳುವ ಕಾಲ ಬಂದಿದೆ. ಕಂಪ್ಯೂಟರ್ ಇಂದಿನ ದಿನಗಳಲ್ಲಿ ಕೇವಲ ಒಂದು ಪರಿಕಲ್ಪನೆಯಾಗಿ ಉಳಿದಿಲ್ಲ; ಅದು ನಮ್ಮ ಜನಜೀವನದ ಪರಿಕಲ್ಪನೆಯನ್ನೇ ಬದಲಿಸಿದೆ. ದಿನನಿತ್ಯದ ಬದುಕಿನ ವಿಧಾನವೇ ಅದಾಗಿದೆ. ಇಂದು ತಂತ್ರಜ್ಞಾನದಿಂದಾಗಿ ನಮ್ಮ ಮೂಲ ಅಗತ್ಯತೆಗಳು ಸುಲಭವಾಗಿ ಈಡೇರುತ್ತಿವೆ. ಇಂದಿನ ಬದುಕಿನಲ್ಲಿ ಮಾಹಿತಿ ತಂತ್ರಜ್ಞಾನದ ಪಾತ್ರ ಮಹತ್ವದ್ದು. ಬೆಳಗಿನಿಂದ ರಾತ್ರಿಯವರೆಗೆ ಒಂದಲ್ಲ ಒಂದು ರೂಪದಲ್ಲಿ ಮಾಹಿತಿ ತಂತ್ರಜ್ಞಾನದ ಸವಲತ್ತುಗಳನ್ನು ನಾವೆಲ್ಲ ಬಳಸುತ್ತಲೇ ಇರುತ್ತೇವೆ. ಈ ವ್ಯವಹಾರವನ್ನೆಲ್ಲ ನಮ್ಮ ಭಾಷೆಯಲ್ಲೇ ನಡೆಸುವಂತಾದರೆ ಭಾಷೆ–ತಂತ್ರಜ್ಞಾನಗಳೆರಡರ ವ್ಯಾಪ್ತಿಯೂ ಹೆಚ್ಚುತ್ತದೆ, ಎರಡೂ ಪರಸ್ಪರ ಪೂರಕವಾಗಿ ಬೆಳೆಯುತ್ತವೆ.

ಇಂದು ಗಣಕಗಳು ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಸರ್ವವ್ಯಾಪಿಯಾಗಿ ಆವರಿಸುತ್ತಿದೆ. ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಈ ಬೆಳವಣಿಗೆ ಸಹಜ. ಆದರೆ ಕನ್ನಡವನ್ನು ಗಣಕಯಂತ್ರ ದೊಡನೆ ಬಳಸಲು ಸಾಧ್ಯವಿಲ್ಲವೆಂಬ ಅಜ್ಞಾನದಿಂದ ನಾವು ಮುಕ್ತರಾಗಿ, ಅದರ ಬಳಕೆಯ ಹೆಚ್ಚಳದೊಡನೆ ಅವುಗಳಲ್ಲಿ ಕನ್ನಡದ ಬಳಕೆಯನ್ನು ಹೆಚ್ಚು ಮಾಡದಿದ್ದರೆ, ಕನ್ನಡವು ವ್ಯವಹಾರದ ಆಡಳಿತದ ಭಾಷೆಯ ಸ್ಥಾನದಿಂದ ಕೆಳಗಿಳಿದು ಬರೀ ಆಡುಭಾಷೆಯಾಗಿ, ಮನೆಯ ಮಾತಾಗಿ ಮಾತ್ರ ಉಳಿಯುತ್ತದೆ. 'ವಾಣಿಜ್ಯ ಮತ್ತು ಆಡಳಿತವೇ ನಮ್ಮ ದೈನಂದಿನ ವ್ಯವಹಾರಗಳ ಮುಕ್ಕಾಲು ಅಂಶವಾಗಿರುವುದರಿಂದ, ವಿದ್ಯುನ್ಮಾನ ಮಾಧ್ಯಮದಲ್ಲಿ ಕನ್ನಡವನ್ನು ಸಮರ್ಥವಾಗಿ ಉಪಯೋಗಿಸಲಾಗದಿದ್ದರೆ ಕನ್ನಡದ ದಿನಬಳಕೆ ಸಂಪೂರ್ಣ ಸ್ಥಗಿತವಾಗುವು ದರಿಂದ ಅತ್ಯಗತ್ಯವಾದ ಎಲ್ಲ ಕನ್ನಡ ತಂತ್ರಾಂಶವನ್ನು ಅಭಿವೃದ್ಧಿಪಡಿಸುವುದು ಇಂದಿನ ತುರ್ತುಗಳಲ್ಲಿ ಒಂದಾಗಿದೆ' ಎಂದು ಪೂರ್ಣಚಂದ್ರ ತೇಜಸ್ವಿಯವರು ಹೇಳಿದ ಮಾತುಗಳು ಅಕ್ಷರಶಃ ಸತ್ಯ.

ಮಾಹಿತಿ ತಂತ್ರಜ್ಞಾನ ನಮ್ಮೆಲ್ಲರ ಜೀವನಗಳಲ್ಲಿ ಇಂದು ಹಾಸು ಹೊಕ್ಕಾಗಿದೆ. ನಮ್ಮ ಕಿಸೆಯಲ್ಲಿ ಕೂರುವ ಆ ಮೊಬೈಲ್ ಫೋನ್ ಕೂಡ ಮಾಹಿತಿ ತಂತ್ರಜ್ಞಾನದ ಮಹಾಪೂರ ವನ್ನು ನಮ್ಮ ಬೆರಳಂಚುಗಳಲ್ಲಿ ಹರಿಸುವ ಶಕ್ತಿಯನ್ನು ಹೊಂದಿದೆ. ಆದರೆ ಅದರಲ್ಲಿ ಕನ್ನಡದ ಪ್ರಮಾಣ ಒಂದು ಪ್ರಶ್ನೆ. ದೈನಂದಿನ ಕಾರ್ಯಚಟುವಟಿಕೆಗಳಲ್ಲಿ, ಇಂಟರ್‌ನೆಟ್ ಮೂಲಕ ಹರಟುವಾಗ, ಪತ್ರವ್ಯವಹಾರ ನಡೆಸುವಾಗ, ವಾಣಿಜ್ಯ, ಸರ್ಕಾರಿ ಹಾಗೂ ಇತರೆ ಕಾರ್ಯಚಟುವಟಿಕೆಗಳಲ್ಲಿ ಕನ್ನಡದ ಬಳಕೆ ಆಗುತ್ತಿದೆ. ಅನೇಕ ತಂತ್ರಾಂಶಗಳು ಕನ್ನಡಕ್ಕೆ ಲಿಪ್ಯಂತರವಾಗಿವೆ. ಫೈರ್‌ಫಾಕ್ಸ್, ಗೂಗಲ್ ಕ್ರೋಮ್, ಲಿಬ್ರೆ ಆಫೀಸ್, ಲಿನೆಕ್ಸ್ ಮುಂತಾದ ಕೆಲವು ತಂತ್ರಾಂಶಗಳು ಮುಂತಾದವು ಕನ್ನಡದಲ್ಲಿ ಲಭ್ಯವಿವೆ.

ತಂತ್ರಜ್ಞಾನವು ಇಂದು ಜನರು ಸಂವಹನ ಮಾಡುವ ರೀತಿಯನ್ನೇ ಬದಲಾಯಿಸಿದೆ. ಸಂವಹನ ವ್ಯವಸ್ಥೆಗಳು ಪಾರಿವಾಳ ಸಂದೇಶಗಳಿಂದ ಇಮೇಲ್ ಮತ್ತು ತ್ವರಿತ ಸಂದೇಶಗಳವರೆಗೆ ವಿಕಸನಗೊಂಡಿವೆ. ಸೆಲ್ಯೂಲರ್ ಟೆಕ್ನಾಲಜಿ ಮತ್ತು ಉಪಗ್ರಹ ಸಂವಹನಗಳು ಸಂವಹನ ವೇಗವನ್ನು ಹೆಚ್ಚಿಸಿವೆ ಮತ್ತು ಸಂಪರ್ಕವನ್ನು ಸುಲಭಗೊಳಿಸಿವೆ. ಅಂತರ್ಜಾಲವು ಸುದೀರ್ಘ ಅಂತರದಲ್ಲಿ ಮಾಹಿತಿಯ ಸುಲಭ ವಿನಿಮಯವನ್ನು ಸಾಧ್ಯವಾಗಿಸಿದೆ. ಈಗಲೂ ಸಹ,

ನಾವು ದೂರದ ಒಂದು ವೆಬ್ ಸರ್ವರ್‌ನಿಂದ ಈ ಪುಟವನ್ನು ಓದುತ್ತಿರಬಹುದು. ನಮ್ಮ ಕಂಪ್ಯೂಟರ್ ಮೌಸ್‌ನ ಕೆಲವೇ ಕ್ಲಿಕ್‌ಗಳು ಇಂಟರ್‌ನೆಟ್ಟಿನಲ್ಲಿ ಎಲ್ಲಿಗಾದರೂ ನಮ್ಮನ್ನು ಒಯ್ಯಬಹುದು. ಇಂದು ನಾವು ಅರಿವಿಲ್ಲದೆ ಹೊಸದೊಂದು ಜಗತ್ತನ್ನೇ ಪ್ರವೇಶಿಸುವಂತಾಗಿದೆ. ಶಿಕ್ಷಣದಲ್ಲಿ ಕಂಪ್ಯೂಟರ್‌ಗಳು ಮತ್ತು ಇಂಟರ್‌ನೆಟ್‌ನ ಪಾತ್ರವನ್ನು ನಿರ್ಲಕ್ಷಿಸಲಾಗುವುದಿಲ್ಲ. ಬೋಧನೆಯಲ್ಲಿ ಕಂಪ್ಯೂಟರುಗಳ ಬಳಕೆ ಕಲಿಕೆಯನ್ನು ಆಸಕ್ತಿಕರವಾಗಿಸಿದೆ. ಕಂಪ್ಯೂಟರ್ ಮಾಹಿತಿಯ ಉತ್ತಮ ಸಂಗ್ರಹಣೆ ಮತ್ತು ಪ್ರಸ್ತುತಿಯನ್ನು ಸಾಧ್ಯವಾಗಿಸುತ್ತದೆ, ಇದರಿಂದಾಗಿ ಬೋಧನೆಯ ಪ್ರಕ್ರಿಯೆಯು ಸುಲಭವಾಗಿದೆ ಮತ್ತು ಪರಿಣಾಮಕಾರಿಯಾಗಿದೆ. ಇಂದು ಎಲ್ಲೆಡೆ ಶೈಕ್ಷಣಿಕ ಸಿಡಿಗಳು ಲಭ್ಯವಿದೆ. ಉಪನ್ಯಾಸಗಳು / ಪಾಠಗಳನ್ನು PDF ಅಥವಾ ವೀಡಿಯೋಗಳ ರೂಪದಲ್ಲಿ ವೆಬ್‌ಸೈಟ್‌ಗಳಲ್ಲಿ ಅಪ್ಲೋಡ್ ಮಾಡಬಹುದು. ಇದು ಮಾಹಿತಿಯನ್ನು ಹೆಚ್ಚು ಸುಲಭವಾಗಿ ದೊರಕಿಸುತ್ತದೆ ಮತ್ತು ಜ್ಞಾನ ಹಂಚಿಕೆಗೆ ಉತ್ತಮ ಮಾರ್ಗಗಳನ್ನು ಒದಗಿಸುತ್ತದೆ. ಆನ್ಲೈನ್ ಡಿಗ್ರಿ ಮತ್ತು ತರಬೇತಿ ಕೋರ್ಸ್‌ಗಳು ಶಿಕ್ಷಣವನ್ನು ಸಾರ್ವತ್ರಿಕವಾಗಿಸಿದೆ. ಇಂದು ಜನರು ತಮ್ಮ ಉದ್ಯೋಗಗಳನ್ನು ನಿರ್ವಹಿಸುತ್ತಿರುವಾಗಲೂ ಸಹ ಕಲಿಯುವುದನ್ನು ಮುಂದುವರೆಸಬಹುದು, ಇಂದು ಪ್ರಪಂಚದ ಎಲ್ಲಾ ಮಾಹಿತಿಗಳು ವ್ಯಾಪಕವಾಗಿ ಲಭ್ಯವಿವೆ. ಇತ್ತೀಚೆಗೆ ಸೋಷಿಯಲ್ ಮೀಡಿಯಾ ಅಂತರ್ಜಾಲ ಬಳಕೆದಾರರ ಅವಶ್ಯಕತೆಯಾಗುವುದಷ್ಟೇ ಅಲ್ಲ ಅವು ಒಂದು ಇಡೀ ಸಮಾಜದ ಅಭಿಪ್ರಾಯ ರೂಪಿಸುವ, ಆಳುವ ಸರ್ಕಾರದ ಅಳಿವು ಉಳಿವಿನ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನೂ ಹೊಂದಿವೆ. ತಂತ್ರಜ್ಞಾನ ಕ್ಷೇತ್ರವನ್ನು ಕುರಿತು ಜನರಿಗೆ ಹೆಚ್ಚಿನ ಮಾಹಿತಿ ನೀಡುವುದರ ಅಗತ್ಯವೂ ಬಹಳಷ್ಟಿದೆ. ಹೊಸ ತಂತ್ರಜ್ಞಾನಗಳ ಬಗೆಗಷ್ಟೇ ಅಲ್ಲ, ಈಗಾಗಲೇ ಲಭ್ಯವಿರುವ ಸವಲತ್ತುಗಳನ್ನು ಜವಾಬ್ದಾರಿಯುತವಾಗಿ ಬಳಸುವುದು ಹೇಗೆ ಎನ್ನುವ ನಿಟ್ಟಿನಲ್ಲೂ ಸಾಕಷ್ಟು ಮಾಹಿತಿ ಪ್ರಸರಣದ ಅವಶ್ಯಕತೆಯಿದೆ.

**ಕಠಿಣ ಶಬ್ದಗಳು**

೧. ಅಂತರ್‌ಸಂಪರ್ಕ

೨. ಪೋರ್ಟಲ್

೩. ಅಪ್‌ಲೋಡ್

೪. ವಿಶ್ವವ್ಯಾಪಿ ಜಾಲ

೫. ಸಂವಹನ

## ೧೨.೨. ಅಂತರ್ಜಾಲ

ಇದು ಅನೇಕ ಕಂಪ್ಯೂಟರ್ ಜಾಲಗಳ ಅಂತರ್‌ಸಂಪರ್ಕದಿಂದ ರೂಪುಗೊಂಡ ಮಹಾಜಾಲ. ಒಂದಕ್ಕಿಂತ ಹೆಚ್ಚು ಕಂಪ್ಯೂಟರುಗಳನ್ನು ಪರಸ್ಪರ ಸಂಪರ್ಕಿಸಿದ ಜಾಲಗಳನ್ನು (ನೆಟ್‌ವರ್ಕ್) ಕಚೇರಿಗಳಲ್ಲಿ, ವಿದ್ಯಾ ಸಂಸ್ಥೆಗಳಲ್ಲಿ, ಬ್ಯಾಂಕುಗಳಲ್ಲಿ, ಬಸ್ಸು-ರೈಲು-ವಿಮಾನ ಸಂಸ್ಥೆಗಳಲ್ಲಿ ಬಳಸುವುದನ್ನು ನಾವು ನೋಡಿದ್ದೇವೆ. ಒಂದು ಕಂಪ್ಯೂಟರಿನಿಂದ ಸಾಧ್ಯ ವಾಗುವುದಕ್ಕಿಂತ ಹೆಚ್ಚಿನದನ್ನು ಸಾಧಿಸಿಕೊಳ್ಳಲು ಇಂತಹ ಜಾಲಗಳು ಸಹಾಯ ಮಾಡುತ್ತವೆ. ಇಂತಹ ಹಲವು ಜಾಲಗಳು ಒಟ್ಟು ಸೇರಿದರೆ ಇನ್ನೂ ಹೆಚ್ಚಿನದನ್ನು ಸಾಧಿಸಬಹುದಲ್ಲ ಎಂಬ ಉದ್ದೇಶದಿಂದ ರೂಪುಗೊಂಡದ್ದೇ ಇಂಟರ್‌ನೆಟ್, ಅಂದರೆ ಅಂತರ್ಜಾಲ. ಈ

ಹೆಸರಿನ ಭಾವಾರ್ಥ 'ಇಂಟರ್ ಕನೆಕ್ಷನ್ ಆಫ್ ನೆಟ್‌ವರ್ಕ್' ಎಂದು. ಅನೇಕ ಜಾಲಗಳ ಅಂತರ್‌ಸಂಪರ್ಕದಿಂದ ರೂಪುಗೊಂಡ ಮಹಾಜಾಲ ಇದು. ಸಂವಹನದ ಪರಿಕಲ್ಪನೆಯನ್ನೇ ಆಮೂಲಾಗ್ರವಾಗಿ ಬದಲಿಸಿದ ಹೆಗ್ಗಳಿಕೆ ಅಂತರ್ಜಾಲದ್ದು. ವಿಶ್ವದ ವಿವಿಧೆಡೆಗಳಲ್ಲಿರುವ ಕಂಪ್ಯೂಟರುಗಳು, ಮೊಬೈಲ್ ಫೋನುಗಳು, ಸಂಬಂಧಿತ ಸಾಧನಗಳು, ಲ್ಯಾನ್–ವ್ಯಾನ್ ಮುಂತಾದ ಜಾಲಗಳೆಲ್ಲ ಈ ಅಂತರ್ಜಾಲದಿಂದ ರೂಪುಗೊಂಡಿದೆ. ವಿವಿಧ ತಂತ್ರಾಂಶಗಳು, ಅವುಗಳ ನಡುವೆ ಸಂವಹನ ಸಾಧ್ಯವಾಗಿಸುವ ವ್ಯವಸ್ಥೆಗಳೆಲ್ಲ ಇದರ ಭಾಗಗಳು. ಅಂತರ್ಜಾಲದ ಸಂಪರ್ಕದಲ್ಲಿರುವ ಪ್ರತಿಯೊಂದು ಸಾಧನಕ್ಕೂ ಅಂತರ್ಜಾಲ ದಲ್ಲಿರುವ ಇತರ ಎಲ್ಲ ಸಾಧನಗಳ ಜೊತೆಗೆ ಮಾಹಿತಿ ವಿನಿಮಯ ಮಾಡಿಕೊಳ್ಳುವ ಅವಕಾಶ ಇರುತ್ತದೆ. ವಿಶ್ವವ್ಯಾಪಿ ಜಾಲಕ್ಕೆ (ವರ್ಲ್ಡ್ ವೈಡ್ ವೆಬ್) ಮೂಲಸೌಕರ್ಯ ಒದಗಿಸುವುದು ಅಂತರ್ಜಾಲದ ಪ್ರಮುಖ ಜವಾಬ್ದಾರಿಯಾಗಿದೆ. ಅಂತರ್ಜಾಲದಲ್ಲಿರುವ ಸಾಧನಗಳ ನಡುವಿನ ಸಂಪರ್ಕ ಹೇಗಿರಬೇಕು ಎಂದು ನಿರ್ದೇಶಿಸುವುದೂ ಇದರ ಜವಾಬ್ದಾರಿಯಾಗಿದೆ. 'ಜಾಲದಲ್ಲಿ ಕನ್ನಡವೆಂದರೆ ಅದೊಂದು ಪ್ರಾಯೋಗಿಕ ಪ್ರಯತ್ನವಷ್ಟೆ' ಎನ್ನುವಂತಿದ್ದ ಕಾಲವನ್ನು ದಾಟಿ ಬಹಳ ಮುಂದೆ ಬಂದಿರುವ ನಾವು ಇದೀಗ ಹಲವಾರು ಬಗೆಯ ಕನ್ನಡ ಜಾಲತಾಣಗಳನ್ನು ನೋಡಬಹುದು. ಸಂಘಸಂಸ್ಥೆಗಳ ತಾಣಗಳಷ್ಟೇ ಅಲ್ಲದೆ ಪ್ರಚಲಿತ ವಿದ್ಯಮಾನ, ಸಾಹಿತ್ಯ, ವಿಜ್ಞಾನ ಮುಂತಾದ ಅನೇಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ತಾಣಗಳು ಇಂದು ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಈ ಸಾಲಿನಲ್ಲಿ 'ದಟ್ಸ್ ಕನ್ನಡ'ದಂತಹ ಪೋರ್ಟಲ್‌ಗಳು, 'ಅವಧಿ–ಕೆಂಡಸಂಪಿಗೆ'ಯಂತಹ ಆನ್‌ಲೈನ್ ಪತ್ರಿಕೆಗಳು, 'ಇಜ್ಞಾನ ಡಾಟ್ ಕಾಮ್'ನಂತಹ ವಿಜ್ಞಾನ ತಾಣಗಳು, 'ಚುಕ್ಕುಬುಕ್ಕು–ಸಿರಿನುಡಿ' ಮುಂತಾದ ವಿಶಿಷ್ಟ ತಾಣಗಳು, ವಿವಿಧ ಪತ್ರಿಕೆಗಳ ಆನ್‌ಲೈನ್ ಆವೃತ್ತಿಗಳು –ಹೀಗೆ ಅನೇಕ ಕನ್ನಡ ಜಾಲತಾಣಗಳನ್ನು ನಾವು ಪಟ್ಟಿ ಮಾಡಬಹುದು.

**ಅಭ್ಯಾಸ ೧**

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಅಂತರ್ಜಾಲ ಹೆಸರಿನ ಭಾವಾರ್ಥ ತಿಳಿಸಿ.

೨. ಅಂತರ್ಜಾಲದ ಪ್ರಮುಖ ಜವಾಬ್ದಾರಿ ಯಾವುದು?

೩. ಕನ್ನಡ ಅಂತರ್ಜಾಲ ತಾಣಗಳನ್ನು ಹೆಸರಿಸಿ.

೪. ಅಂತರ್ಜಾಲ ತಾಣಗಳ ಉಪಯೋಗಗಳನ್ನು ತಿಳಿಸಿ.

**ಅಭ್ಯಾಸಗಳಿಗೆ ಉತ್ತರಗಳು**

೧. ಇಂಟರ್‌ಕನೆಕ್ಷನ್ ಅಫ್ ನೆಟ್‌ವರ್ಕ್.

೨. ವಿಶ್ವವ್ಯಾಪಿ ಜಾಲಕ್ಕೆ (ವರ್ಲ್ಡ್ ವೈಡ್ ವೆಬ್) ಮೂಲ ಸೌಕರ್ಯ ಒದಗಿಸುವುದು.

೩. ಕೆಂಡಸಂಪಿಗೆ, ಇಜ್ಞಾನ ಡಾಟ್ ಕಾಮ್, ಚುಕ್ಕು–ಬುಕ್ಕು, ಸಿರಿನುಡಿ.

೪. ಅ. ಮಾಹಿತಿ ವಿನಿಮಯ ಮಾಡಿಕೊಳ್ಳುವ ಅವಕಾಶ.

ಆ. ಪ್ರಚಲಿತ ವಿದ್ಯಮಾನ, ಸಾಹಿತ್ಯ, ವಿಜ್ಞಾನ ಮುಂತಾದ ಅನೇಕ ವಿಷಯಗಳಿಗೆ ಸಂಬಂಧಿಸಿದ ಮಾಹಿತಿ ಪಡೆಯುವುದು.

ಇ. ಒಂದು ಕಂಪ್ಯೂಟರಿನಿಂದ ಸಾಧ್ಯವಾಗುವುದಕ್ಕಿಂತ ಹೆಚ್ಚಿನದನ್ನು ಸಾಧಿಸಿಕೊಳ್ಳಲು ಇಂತಹ ಜಾಲಗಳು ಸಹಾಯ ಮಾಡುತ್ತವೆ.

## ೧೨.೩. ತಂತ್ರಾಂಶ (ವರ್ಡ್ ಪ್ರೊಸೆಸರ್, ಪದಸಂಸ್ಕಾರಕ)



ಇದು ಕಡತಗಳ ರಚನೆ, ಸಂಪಾದನೆ, ಪುಟವಿನ್ಯಾಸ ಹಾಗೂ ಮುದ್ರಣದಲ್ಲಿ ನೆರವಾಗುವ ತಂತ್ರಾಂಶ. ಕಂಪ್ಯೂಟರಿನಲ್ಲಿ ಪಠ್ಯವನ್ನು ಟೆಕ್ಸ್ಟ್ / ಟೈಪ್ ಮಾಡಿ, ಪಠ್ಯವನ್ನು ಸುವ್ಯವಸ್ಥಿತಗೊಳಿಸಿ, ಪುಟವಿನ್ಯಾಸಗೊಳಿಸಿ ಮುದ್ರಣವನ್ನು ಪಡೆಯುವ ಕೆಲಸಗಳಿಗೆ ಪದಸಂಸ್ಕರಣೆ (ವರ್ಡ್ ಪ್ರೊಸೆಸಿಂಗ್) ಎಂದು ಕರೆಯಲಾಗಿದೆ. ಕಂಪ್ಯೂಟರಿನ ಅಸಂಖ್ಯ ಉಪಯೋಗಗಳ ಪೈಕಿ ಕಡತಗಳ ರಚನೆ, ಸಂಪಾದನೆ, ಪುಟವಿನ್ಯಾಸ ಹಾಗೂ ಮುದ್ರಣಕ್ಕೆ ಪ್ರಮುಖ ಸ್ಥಾನವಿದೆ. ಇವಿಷ್ಟೂ ಅಂಶಗಳನ್ನು ಒಟ್ಟು ಸೇರಿಸಿ 'ವರ್ಡ್ ಪ್ರೊಸೆಸಿಂಗ್' (ಪದಸಂಸ್ಕರಣೆ) ಎಂದು ಗುರುತಿಸಲಾಗುತ್ತದೆ. ಪದಸಂಸ್ಕರಣೆಯ ಈ ಕೆಲಸದಲ್ಲಿ ನೆರವಾಗುವ ತಂತ್ರಾಂಶಗಳನ್ನು ವರ್ಡ್ ಪ್ರೊಸೆಸರ್, ಅಂದರೆ ಪದಸಂಸ್ಕಾರಕಗಳೆಂದು ಕರೆಯುತ್ತಾರೆ. ಅಂದ ಹಾಗೆ ಪದ ಸಂಸ್ಕಾರಕಗಳಲ್ಲಿರುವುದು ಕಡತಗಳ ರಚನೆ ಹಾಗೂ ವಿನ್ಯಾಸಕ್ಕೆ ಬೇಕಾದ ಸೌಲಭ್ಯಗಳಷ್ಟೇ ಅಲ್ಲ. ಕಡತದಲ್ಲಿರುವ ಪದಗಳ ಸಂಖ್ಯೆಯನ್ನು ತಿಳಿಸುವ, ಅಕ್ಷರದೋಷ–ವ್ಯಾಕರಣದ ತಪ್ಪುಗಳನ್ನು ತೋರಿಸುವ, ಕಡತದಲ್ಲಿ ಮಾಡಲಾದ ಬದಲಾವಣೆಗಳ ಇತಿಹಾಸವನ್ನು ತೋರಿಸುವಂತಹ ಅನುಕೂಲಗಳೂ ಅನೇಕ ಪದ ಸಂಸ್ಕಾರಕಗಳಲ್ಲಿರುತ್ತವೆ. ಪಠ್ಯವನ್ನಷ್ಟೇ ಟೈಪ್ ಮಾಡಿ ಉಳಿಸಿಡಲು ಸಹಾಯ ಮಾಡುವ ನೋಟ್‌ಪ್ಯಾಡ್‌ನಂತಹ ಸರಳ ತಂತ್ರಾಂಶಗಳಿಂದ ಪ್ರಾರಂಭಿಸಿ ಪತ್ರಿಕೆ–ಪುಸ್ತಕಗಳ ವಿನ್ಯಾಸದಲ್ಲಿ ಬಳಕೆಯಾಗುವ ಆಡೋಬ್ ಪೇಜ್ ಮೇಕರ್, ಇನ್ ಡಿಸೈನ್‌ನಂತಹ ತಂತ್ರಾಂಶಗಳವರೆಗೆ ವಿವಿಧ ಉದ್ದೇಶಗಳಿಗಾಗಿ ಬೇರೆಬೇರೆ ಪದಸಂಸ್ಕಾರಕಗಳನ್ನು ಬಳಸುವುದು ಸಾಮಾನ್ಯ ಅಭ್ಯಾಸವಾಗಿದೆ. ಮೈಕ್ರೋಸಾಫ್ಟ್ ಆಫೀಸ್, ಓಪನ್ ಆಫೀಸ್, ಲಿಬ್ರೆ ಆಫೀಸ್ ಮುಂತಾದ ಎಲ್ಲ ತಂತ್ರಾಂಶ ಸಂಗ್ರಹಗಳಲ್ಲೂ ಒಂದೊಂದು ಪದಸಂಸ್ಕಾರಕ ಇರುತ್ತದೆ. ಮೈಕ್ರೋಸಾಫ್ಟ್ ಆಫೀಸ್ (೩) ತಂತ್ರಾಂಶ ಸಂಗ್ರಹದ ಭಾಗವಾದ 'ಮೈಕ್ರೋಸಾಫ್ಟ್ ವರ್ಡ್' ಸಾಕಷ್ಟು ಹೆಸರು ಮಾಡಿರುವ, ವ್ಯಾಪಕವಾಗಿ ಬಳಕೆಯಾಗುವ ಇಂತಹ ಪದ ಸಂಸ್ಕಾರಕಗಳಲ್ಲೊಂದು. ಕನ್ನಡಭಾಷೆಯಲ್ಲಿ ಕಡತಗಳ ಸೃಷ್ಟಿಯನ್ನು ಸಾಧ್ಯವಾಗಿಸುವ ಸೇಡಿಯಾಪು, ಬರಹ, ನುಡಿ, ಪದ ಮುಂತಾದ ತಂತ್ರಾಂಶಗಳೂ ಪದಸಂಸ್ಕಾರಕಗಳೇ. ಕೆ.ಪಿ. ರಾವ್ ಅವರ 'ಸೇಡಿಯಾಪು' ಕನ್ನಡದ ಮೊದಲ ತಂತ್ರಾಂಶ ಹಾಗೂ ಕನ್ನಡದ ಬೆಳವಣಿಗೆಯ ಉದ್ದೇಶ್ಯದಿಂದ ಉಚಿತವಾಗಿ ಹಂಚಲಾದ ತಂತ್ರಾಂಶ. ಅಂತೆಯೇ ಪವನಜ ಅವರ 'ಬರಹ' ಅನಕೃ ಅವರ ನೆನಪಿಗೆ ತಂದ ತಂತ್ರಾಂಶವಾದರೆ 'ನುಡಿ' ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿರುವ ತಂತ್ರಾಂಶ.

ಪದಸಂಸ್ಕರಣವು (word-processing) ಈ ತಂತ್ರಾಂಶಗಳ ಮೊದಲ ಹಂತ. ಪತ್ರ, ಲೇಖನ, ದಾಖಲೆಗಳನ್ನು ಬರೆಯಲು, ತಿದ್ದಲು ಇವುಗಳ ಬಳಕೆ ಆಗುತ್ತಿದೆ. ಪದಸಂಸ್ಕರಣದ ಕ್ರಮವಿಧಿಗಳಲ್ಲಿ ಹಲವು ಸೌಕರ್ಯಗಳಿವೆ. ಒಮ್ಮೆ ಬರೆದ ಪತ್ರ ಅಥವಾ ಲೇಖನವನ್ನು ಪುನಃ ಪುನಃ ತಿದ್ದಬಹುದು; ತಿದ್ದಿ ಮುದ್ರಿಸಬಹುದು; ಇಡೀ ವಾಕ್ಯ ಅಥವಾ ಪ್ಯಾರಾವನ್ನು ಒಂದು ಜಾಗದಿಂದ ಎತ್ತಿ ಇನ್ನೊಂದು ಕಡೆಗೆ ಬದಲಾಯಿಸಬಹುದು; ಒಂದೇ ಪತ್ರವನ್ನು ಹಲವಾರು ವ್ಯಕ್ತಿಗಳಿಗೆ ಅವರವರ ಹೆಸರು ವಿಳಾಸ ಸೇರಿಸಿ ಕಳುಹಿಸಬಹುದು. ಪದಸಂಸ್ಕರಣದ ಮುಂದುವರೆದ ಸೌಕರ್ಯವೇ ಡಿ.ಟಿ.ಪಿ. (desk

top publishing). ಪಠ್ಯದ ಜೊತೆ ಚಿತ್ರಗಳನ್ನು ಸೇರಿಸುವುದು, ಅಕ್ಷರದ ಗಾತ್ರವನ್ನು ಸಾವಿರದೊಂದು ಇಂಚಿನಷ್ಟು ನಿಯಂತ್ರಣೆ ಮಾಡುವುದು, ತಲೆಬರಹ, ಪ್ಯಾರಾಗಳ ನಡುವಿನ ಗಾತ್ರ ಮತ್ತು ಅಂತರ, ಹೀಗೆ ಹಲವಾರು ಸೌಕರ್ಯಗಳು ಇಲ್ಲಿವೆ. ಈಗ ಮುದ್ರಣವಾಗುವ ಎಲ್ಲ ಪುಸ್ತಕಗಳೂ ಇದೇ ವಿಧಾನದಿಂದ ತಯಾರಾಗುತ್ತಿವೆ.

ಮಾರುಕಟ್ಟೆಯಲ್ಲಿ ಸಿದ್ಧರೂಪದಲ್ಲಿ ದೊರೆಯುವ ಯಾವುದೇ ರೂಪದ ಅಪ್ಲಿಕೇಷನ್ ಸಾಫ್ಟ್‌ವೇರ್‌ನ್ನು ಪ್ಯಾಕೇಜ್ಡ್ ಅಪ್ಲಿಕೇಷನ್ ಎಂದು ಕರೆಯಲಾಗುತ್ತದೆ. ಉದಾಹರಣೆಗೆ, ಎಂ.ಎಸ್. ಆಫೀಸ್ ಸೂಟ್ ವರ್ಡ್ ಪ್ರೊಸೆಸರ್ ಒಂದು ಸಾಫ್ಟ್‌ವೇರ್ ಆಗಿದ್ದು ನಮಗೆ ಟೆಕ್ಸ್ಟ್ ಜೊತೆ ಕೆಲಸ ಮಾಡಲು ಸಹಕರಿಸುತ್ತದೆ. ಎಂ.ಎಸ್. ವರ್ಡ್ ಅಥವಾ ಮೈಕ್ರೋಸಾಫ್ಟ್ ವರ್ಡ್ ಎನ್ನುವುದು ಮೈಕ್ರೋಸಾಫ್ಟ್ ಸಂಸ್ಥೆಯು ರೂಪಿಸಿರುವ, ಒಂದು ವರ್ಡ್ ಪ್ರೊಸೆಸರ್ ಮತ್ತು ಪದಸಂಸ್ಕರಣ ತಂತ್ರಾಂಶ. ಇದು ಹಣ ಪಾವತಿಸಿ ಬಳಸಬೇಕಾದ ತಂತ್ರಾಂಶ. ಇವುಗಳಲ್ಲಿ ನೀವು ಅಕ್ಷರ ಜೋಡಣೆ ಮಾಡಬಹುದು; ಕೆಲವೆಡೆ ಚಿತ್ರಗಳನ್ನೂ ಸೇರಿಸಬಹುದು. ಇಷ್ಟೆಲ್ಲ ಅನುಕೂಲತೆಗಳಿದ್ದರೂ ವರ್ಡ್ ಪ್ರೊಸೆಸರ್‌ಗಳಲ್ಲಿ ಕೆಲವು ಅನಾನುಕೂಲಗಳಿವೆ ಎಂಬುದು ಕೆಲವು ತಜ್ಞರ ಅಭಿಮತ. ಅವುಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

೧. ವರ್ಡ್ ಪ್ರೊಸೆಸರ್‌ಗಳಲ್ಲಿ ಚಿತ್ರಗಳನ್ನು ಬದಲಿಸುವ, ತಿದ್ದುವ, ಬೇಕಾದ ಸ್ಥಳದಲ್ಲಿ ಬೇಕಾದ ರೀತಿಯಲ್ಲಿ ಸೇರಿಸುವುದಕ್ಕೆ ಆಗುವುದಿಲ್ಲ; ಇರುವ ಸೀಮಿತ ಅವಕಾಶಗಳಲ್ಲಿ ಈ ಚಿತ್ರಗಳನ್ನು ಪಠ್ಯದ ಪಕ್ಕದಲ್ಲೋ, ಪಠ್ಯದ ಕೆಳಭಾಗದಲ್ಲೋ ಸುಮ್ಮನೆ ಇಡಬಹುದೇ ಹೊರತು ಹೆಚ್ಚಿನ ಸಾಧ್ಯತೆಗಳಿಲ್ಲ.

೨. ವರ್ಡ್ ಪ್ರೊಸೆಸರ್‌ಗಳಲ್ಲಿ ಪಠ್ಯವನ್ನು ವಿವಿಧ ವಿನ್ಯಾಸಗಳಿಗೆ ತಕ್ಕಂತೆ ರೂಪಿಸುವ ಅವಕಾಶಗಳೂ ತುಂಬಾ ಸೀಮಿತ. ಅಲ್ಲದೆ ಅಲ್ಲಲ್ಲಿ ಪಠ್ಯಗಳನ್ನು ಎತ್ತಿ ತೆಗೆಯುವ, ಪುಟದ ಹೊರಗಡೆ ಇಟ್ಟುಕೊಳ್ಳುವ, ಅಥವಾ ಪಠ್ಯಭಾಗವನ್ನು ಬೇಕೆಂದ ಸ್ಥಳದಲ್ಲಿ ಕೂರಿಸುವ ಅವಕಾಶವಿಲ್ಲ.

೩. ವರ್ಡ್ ಪ್ರೊಸೆಸರ್‌ಗಳಲ್ಲಿ ಚಿತ್ರ ಮತ್ತು ಪಠ್ಯಗಳನ್ನು ಭಿನ್ನಭಿನ್ನ ವಿನ್ಯಾಸಗಳಿಗೆ ರೂಪಾಂತರಿಸುವ ಅವಕಾಶವಿಲ್ಲ. ಆದ್ದರಿಂದ, ಅಸಂಖ್ಯ ವಿನ್ಯಾಸದ ಸಾಧ್ಯತೆಗಳನ್ನು ಹೊಂದಿರುವ ಡಿ.ಟಿ.ಪಿ. ತಂತ್ರಾಂಶಗಳನ್ನೇ ನಾವು ಡಿ.ಟಿ.ಪಿ. ಮಾಡಲು ಬಳಸಬೇಕಿದೆ. ಆರಂಭದ ಅಕ್ಷರ ಜೋಡಣೆಗೆ ಮಾತ್ರವೇ ವರ್ಡ್ ಪ್ರೊಸೆಸರ್‌ಗಳನ್ನು ಬಳಸಬಹುದಾಗಿದೆ.

**ವರ್ಡ್ ಪ್ರೊಸೆಸಿಂಗ್‌ನ ಅನುಕೂಲಗಳು**

೧. ಕಾಗದದ ಪತ್ರದಲ್ಲಿ (ಡಾಕ್ಯುಮೆಂಟ್) ಟೈಪ್ ಮಾಡುವುದು.

೨. ತಿದ್ದುಪಡಿ ಮಾಡುವುದು.

೩. ಮುದ್ರಿಸಿದ ಪಠ್ಯವನ್ನು ಆಕರ್ಷಕಗೊಳಿಸುವುದು.

೪. ಅಕ್ಷರಗಳ ಆಕಾರ, ಪ್ರಕಾರ ಬದಲಾಯಿಸುವುದು.

೫. ಅಕ್ಷರಗಳನ್ನು ಕಟ್ (ಕತ್ತರಿಸುವುದು), ಕಾಪಿ (ನಕಲು), ಪೇಸ್ಟ್ (ಅಂಟಿಸುವುದು) ಮತ್ತು ಇನ್‌ಸರ್ಟ್ ಮಾಡುವುದು.

೬. ಬಾರ್ಡರ್ಸ್ (ಚೌಕಟ್ಟು) ಮತ್ತು ಶೇಡಿಂಗ್ (ನೆರಳು) ಕೊಡುವುದು.

೭. ಮಾಡಿದ ಕೆಲಸವನ್ನು ಉಳಿಸುವುದು (ಸೇವ್).

೮. ಮಾಡಿದ ಕೆಲಸವನ್ನು ಮುದ್ರಿಸುವುದು (ಪ್ರಿಂಟ್ ಮಾಡುವುದು).

**ವರ್ಡ್ ಪ್ರೊಸೆಸರ್‌ನ ಉಪಯೋಗಗಳು**

೧. ನಾವು ಬರೆದಿರುವ ಯಾವುದೇ ವಿಷಯವನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಬಹುದು.

೨. ನಾವು ನಮ್ಮ ಡಾಕ್ಯುಮೆಂಟನ್ನು ಹಲವು ಪ್ರತಿಗಳಲ್ಲಿ ನಮಗೆ ಬೇಕೆನಿಸಿದಾಗ ಮುದ್ರಿಸಬಹುದು.

೩. ಡಾಕ್ಯುಮೆಂಟ್‌ನ ಪ್ರತಿಯನ್ನು ಪುನಃ ಇಡೀ ವಿಷಯವನ್ನು ಮತ್ತೆ ಟೈಪ್ ಮಾಡದೇ ಬದಲಾವಣೆಗಳನ್ನು ಮಾಡಬಹುದು.

೪. ವರ್ಡ್ ಪ್ರೊಸೆಸರ್‌ನ ಮೂಲಭೂತ ವೈಶಿಷ್ಟ್ಯಗಳನ್ನು ಕಲಿಯುವ ಮೂಲಕ ಅದನ್ನು ನಾವು ಸರಳವಾಗಿ, ಪರಿಣಾಮಕಾರಿಯಾಗಿ ಉಪಯೋಗಿಸಬಹುದು.

೫. ವರ್ಡ್ ಪ್ರೊಸೆಸಿಂಗ್ ತಂತ್ರಾಂಶವು ನಮ್ಮ ಪದಗಳು ಕಾಣುವ ರೀತಿಯನ್ನು ಶೀಘ್ರವಾಗಿ ಮತ್ತು ಸುಲಭವಾಗಿ ಬದಲಾಯಿಸುವುದಷ್ಟೇ ಅಲ್ಲ, ಚಿತ್ರಗಳನ್ನು ಸೇರಿಸಲು ಮತ್ತು ವೆಬ್ ಪುಟಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ. ಮೈಕ್ರೋಸಾಫ್ಟ್ / ಓಪನ್ ಆಫೀಸ್, ಆರ್ಗ್ ರೈಟರನ್ನು ಒಳಗೊಂಡ ಹಲವಾರು ವರ್ಡ್ ಪ್ರೊಸೆಸಿಂಗ್ ತಂತ್ರಾಂಶಗಳಿವೆ.

ವರ್ಡ್ ಪ್ರೊಸೆಸಿಂಗ್ ತಂತ್ರಾಂಶವು ಪದಗಳು ಕಾಣುವ ರೀತಿಯನ್ನು ಶೀಘ್ರವಾಗಿ ಮತ್ತು ಸುಲಭವಾಗಿ ಬದಲಾಯಿಸುವುದಷ್ಟೇ ಅಲ್ಲದೆ ಚಿತ್ರಗಳನ್ನು ಸೇರಿಸಲು ಮತ್ತು ವೆಬ್ ಪುಟಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ.

**ಕಠಿಣ ಪದಗಳು**

೧. ಕಡತ

೨. ತಂತ್ರಾಂಶ

೩. ನೋಟ್‌ಪ್ಯಾಡ್

೪. ಸಂಸ್ಕಾರಕ

೫. ಅಪ್ಲಿಕೇಶನ್

**ಅಭ್ಯಾಸ ೨**

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ವರ್ಡ್ ಪ್ರೊಸೆಸಿಂಗ್ ಅಥವಾ ಪದ ಸಂಸ್ಕರಣೆ ಎಂದರೇನು?

೨. ಪದಸಂಸ್ಕರಣೆಯ ಕೆಲಸದಲ್ಲಿ ನೆರವಾಗುವ ತಂತ್ರಾಂಶ ಯಾವುದು?

೩. ಪದಸಂಸ್ಕಾರಕಗಳ ಉಪಯೋಗಗಳೇನು?

೪. ಮೈಕ್ರೋಸಾಫ್ಟ್ ವರ್ಡ್ ತಂತ್ರಾಂಶವನ್ನು ರೂಪಿಸಿದ ಸಂಸ್ಥೆ ಯಾವುದು?

೫. ವರ್ಡ್ ಪ್ರೊಸೆಸಿಂಗ್‌ನ ಅನುಕೂಲಗಳೇನು?

೬. ವರ್ಡ್ ಪ್ರೊಸೆಸಿಂಗ್‌ನ ಅನಾನುಕೂಲಗಳನ್ನು ತಿಳಿಸಿ.

## ೧೨.೪. ಯುನಿಕೋಡ್ ಮತ್ತು ಕನ್ನಡ

ಗಣಕೀಕರಣದಲ್ಲಿ ಯುನಿಕೋಡ್ ಎಂದರೆ ಒಂದು ಅಂತರರಾಷ್ಟ್ರೀಯ ನಿರ್ದಿಷ್ಟಮಾನ. ಯುನಿಕೋಡ್ ಎನ್ನುವುದು ಇಂಗ್ಲಿಷ್ ಸೇರಿದಂತೆ ಬಹುತೇಕ ಎಲ್ಲಾ ವಿಶ್ವ ಭಾಷೆಗಳನ್ನು ಕಂಪ್ಯೂಟರ್‌ನಲ್ಲಿ ಗೊಂದಲವಿಲ್ಲದೆ ಪ್ರತಿನಿಧಿಸುವ, ಬಳಸಲು ಸಾಧ್ಯವಾಗಿಸುವ ಒಂದು 'ಎನ್ಕೋಡಿಂಗ್' ಸ್ಟ್ಯಾಂಡರ್ಡ್. ಯುನಿಕೋಡ್ ಎಂಬುದರ ಅರ್ಥ ವಿಶ್ವಸಂಕೇತ. ಪ್ರಪಂಚಕ್ಕೆಲ್ಲ ಒಂದೇ ಸಂಕೇತವಿಧಾನ ಎಂಬ ಆಶಯ ಹೊಂದಿರುವ ಯುನಿಕೋಡ್‌ನಲ್ಲಿ ಪ್ರಪಂಚದ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಶ್ರೇಣಿ ಇರುತ್ತದೆ. ಯುನಿಕೋಡ್ ಆಧಾರಿತ ತಂತ್ರಾಂಶಗಳಲ್ಲಿ ಬೆರಳಚ್ಚು ಮಾಡಿದ ಮಾಹಿತಿಯನ್ನು ನೇರವಾಗಿ ಮಾಹಿತಿ ಶೇಖರಣೆಯ ಸಂಕೇತವಾದ ಯುನಿಕೋಡ್‌ನಲ್ಲೇ ಸಂಗ್ರಹಿಸಿಡಲಾಗುತ್ತದೆ. ಮಾಹಿತಿ ಸಂವಹನೆಯಲ್ಲಿ ಅಕ್ಷರಶೈಲಿಯ ಸಂಕೇತಗಳ ಬದಲಿಗೆ ಮೂಲ ಮಾಹಿತಿಯನ್ನೇ ಕಳುಹಿಸುವುದರಿಂದ ಸಂದೇಶ ಪಡೆದುಕೊಳ್ಳುವವರ ಗಣಕದಲ್ಲಿ ಇಂಥದ್ದೇ ಅಕ್ಷರಶೈಲಿ ಇರಬೇಕು ಎಂಬ ಅಗತ್ಯ ಇರುವುದಿಲ್ಲ. ನಾವು ಕಳುಹಿಸಿದ ಕಡತವನ್ನು ಅಥವಾ ನಮ್ಮ ಜಾಲತಾಣವನ್ನು ಬೇರೊಬ್ಬರು ಓದಲು ಕನ್ನಡದ ಯಾವುದೇ ಓಪನ್ ಟೈಪ್ ಅಕ್ಷರಶೈಲಿ ಇದ್ದರೆ ಸಾಕು. ವಿನ್ಯಾಸದಲ್ಲಿ ಬದಲಾವಣೆಯಿಲ್ಲದೆ ಯಾವುದೇ ತಂತ್ರಾಂಶ ಅಥವಾ ಜಾಲತಾಣವನ್ನು ಬೇರೆಬೇರೆ ಭಾಷೆಯಲ್ಲಿ ಬಳಸಲೂ ಯುನಿಕೋಡ್ ಸಹಾಯ ಮಾಡುತ್ತದೆ. ಅಷ್ಟೇ ಅಲ್ಲ, ಯುನಿಕೋಡ್‌ನಲ್ಲಿ ಮಾಹಿತಿಯನ್ನು ಶೇಖರಿಸುವುದಾದರೆ ಪ್ರಪಂಚದ ಎಲ್ಲ ಭಾಷೆಗಳನ್ನೂ ಒಂದೇ ಕಡತದಲ್ಲಿ ಸಂಗ್ರಹಿಸಿಡಬಹುದು. ವಿಶ್ವವ್ಯಾಪಿ ಜಾಲದಲ್ಲಿರುವ ಮಾಹಿತಿ ಯುನಿಕೋಡ್‌ನಲ್ಲಿದ್ದರೆ ಸರ್ಚ್ ಇಂಜಿನ್‌ಗಳನ್ನು ಬಳಸಿ ಸುಲಭವಾಗಿ ಹುಡುಕಲೂಬಹುದು.

'ANSI'ಯನ್ನು ಆಂಗ್ಲ ಭಾಷೆಯನ್ನಷ್ಟೇ ಗಣಕಕ್ಕೆ ಸೇರಿಸಲು ಸಿದ್ಧಪಡಿಸಲಾಯಿತಾದರೂ ಪ್ರಪಂಚದ ಬೇರೆ ಬೇರೆ ಭಾಷೆಗಳನ್ನು ಆರಂಭದಲ್ಲಿ ಇದರ ಮೂಲಕವೇ ಸಂಕೇತ ರೂಪಕ್ಕೆ ಪರಿವರ್ತಿಸಲಾಗುತ್ತಿತ್ತು. ಆದರೆ, ಆಂಗ್ಲ ಭಾಷೆಯನ್ನು ಹೊರತುಪಡಿಸಿ ಬೇರೆ ಭಾಷೆಗಳನ್ನು ಸಂಗ್ರಹಿಸುವ ಪದ್ಧತಿಯಲ್ಲಿ ಒಂದು ಶಿಷ್ಟತೆ (ಸ್ಟ್ಯಾಂಡರ್ಡ್) ಇರಲಿಲ್ಲ. ಇದರಿಂದಾಗಿ ಅಂತರಜಾಲದಲ್ಲಿ ವಿವಿಧ ಭಾಷೆಗಳ ಪಠ್ಯವನ್ನು ತೋರಿಸುವುದು ಕಷ್ಟದ ಕೆಲಸವಾಗಿತ್ತು. ಈ ಸಮಸ್ಯೆಯನ್ನು ಪರಿಹರಿಸಲು ಯುನಿಕೋಡ್ ಎಂಬ ಅಂತರರಾಷ್ಟ್ರೀಯ ಶಿಷ್ಟತೆಯನ್ನು ಜಾರಿಗೊಳಿಸಲಾಯಿತು. ಈ ಶಿಷ್ಟತೆಯನ್ನು 'ಯುನಿಕೋಡ್ ಕನ್ಸೋರ್ಟಿಯಂ' ಎನ್ನುವ ಸಂಘಟನೆಯು ನಿರ್ವಹಿಸುತ್ತದೆ. ಕಾಲಕಾಲಕ್ಕೆ ಭಾಷೆಗಳ ವರ್ಣಮಾಲೆಗಳಲ್ಲಾಗುವ ಬದಲಾವಣೆಗಳಿಗೆ ಅನುಗುಣವಾಗಿ ಶಿಷ್ಟತೆಯನ್ನು ಬದಲಾಯಿಸುವ ಅಥವಾ ಈ ಶಿಷ್ಟತೆಗೆ ಸಂಬಂಧಪಟ್ಟ ಇತರ ಕೆಲಸಗಳನ್ನು ಈ ಸಂಘಟನೆಯು ನೋಡಿಕೊಳ್ಳುತ್ತದೆ. ಇದರಿಂದಾಗಿ ಪ್ರಪಂಚದ ಎಲ್ಲಾ ಭಾಷೆಗಳನ್ನೂ ಗಣಕದಲ್ಲಿ ಸೇರಿಸುವುದು ಸುಲಭಸಾಧ್ಯ. ಆದ್ದರಿಂದ ಯಾವುದೇ ಭಾಷೆಯನ್ನು ಅಂತರ್ಜಾಲದಲ್ಲಿ ತೋರಿಸುವುದು ಸಾಧ್ಯವಾಗುತ್ತದೆ. ಅಲ್ಲದೇ ಈ ಏಕರೂಪ ಶಿಷ್ಟತೆಯು ವಿವಿಧ ಭಾಷೆಗಳಲ್ಲಿ ತಂತ್ರಾಂಶವನ್ನು ಸಿದ್ಧಪಡಿಸಲು ಅನುಕೂಲ ಮಾಡಿಕೊಡುತ್ತದೆ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಕನ್ನಡದಲ್ಲಿನ ಅನೇಕ ಮಾಹಿತಿಗಳು ಅಂತರ್ಜಾಲದಲ್ಲಿ ಲಭ್ಯವಿವೆ; ಅಲ್ಲದೇ ಕನ್ನಡದಲ್ಲಿಯೂ ತಂತ್ರಾಂಶದ ಬೆಳವಣಿಗೆ ಸಾಧ್ಯವಾಗಿದೆ.

ನೀವು ಅಂಗಡಿಗೆ ಹೋಗಿ ಒಂದು ಬಲ್ಬ್ ಬೇಕೆಂದು ಕೇಳಿ ನೋಡಿ. ಅಂಗಡಿಯಾತ ನಿಮ್ಮ ಮನೆಯಲ್ಲಿ ಯಾವ ಕಂಪೆನಿಯ ಹೋಲ್ಡರ್ ಇದೆ ಎಂದು ಕೇಳುವುದಿಲ್ಲ. ಯಾಕೆಂದರೆ ಯಾವುದೇ ಕಂಪೆನಿಯ ಹೋಲ್ಡರ್ ಆದರೂ ಎಲ್ಲ ಬಲ್ಬ್‌ಗಳು ಎಲ್ಲ ಹೋಲ್ಡರ್‌ಗಳಿಗೆ ಹೊಂದಿಕೆಯಾಗುತ್ತವೆ. ಆದರೆ ಕನ್ನಡ ಮತ್ತು ಗಣಕ ಕ್ಷೇತ್ರದಲ್ಲಿ ಈ ರೀತಿ ಆಗುವುದಿಲ್ಲ. ನಮ್ಮ ಮನೆಯ ಗಣಕದಲ್ಲಿ ಕಡತವೊಂದನ್ನು ತಯಾರಿಸಿ ಅದನ್ನು ಲೇಸರ್ ಮುದ್ರಣಕ್ಕೆ ಯಾವುದಾದರು ಡಿ.ಟಿ.ಪಿ. ಅಥವಾ ಸೈಬರ್ ಕೇಂದ್ರಕ್ಕೆ ತೆಗೆದುಕೊಂಡು ಹೋದಾಗ, ಆತ ನಮ್ಮನ್ನು ಕೇಳುವ ಪ್ರಶ್ನೆಯೆಂದರೆ 'ನೀವು ಯಾವ ತಂತ್ರಾಂಶ ತಯಾರಿಸಿ ಕಡತವನ್ನು ತಯಾರು ಮಾಡಿದ್ದೀರಾ?' ನೀವು ಬಳಸಿದ ತಂತ್ರಾಂಶ ಆತನ ಗಣಕದಲ್ಲಿ ಇಲ್ಲದಿರುವ ಸಂಭವವೇ ಹೆಚ್ಚು. ಕನ್ನಡದ ಯಾವುದೇ ತಂತ್ರಾಂಶವನ್ನು ಬಳಸಿ ತಯಾರಿಸಿದ ಕಡತವನ್ನು ಕನ್ನಡದ ಯಾವುದೇ ತಂತ್ರಾಂಶದಲ್ಲಿ ಓದಲು ಸಾಧ್ಯವಿರಬೇಕಲ್ಲವೇ ಎಂದು ನಮಗೆ ಆಗ ಅನಿಸುವುದು ಸಹಜ. ಅದನ್ನು ಸಾಧ್ಯ ಮಾಡಿಕೊಡುವುದೇ ಈ ಯುನಿಕೋಡ್. ಕನ್ನಡದಲ್ಲಿ ಕಡತವೊಂದನ್ನು ತಯಾರಿಸಿ ಜಪಾನಿಗೆ ಕಳುಹಿಸಿದರೆ ಅವರಿಗೆ ಇದು ಕನ್ನಡ ಭಾಷೆಯಲ್ಲಿದೆ ಎಂದು ತಿಳಿಯುವುದು ಹೇಗೆ? ವಿಶ್ವಕ್ಕೆಲ್ಲ ಒಂದೇ ಸಂಕೇತ ವಿಧಾನ ಇದ್ದರೆ ಒಳ್ಳೆಯದಲ್ಲವೇ? ಇದುವೇ ಯುನಿಕೋಡ್.

ಯುನಿಕೋಡ್ ಅಳವಡಿಸಿದ ತಂತ್ರಾಂಶಗಳನ್ನು ಬಳಸುವ ಮೂಲಕ ಕನ್ನಡದ ಅಥವಾ ಯಾವುದೇ ಭಾರತೀಯ ಭಾಷೆಯ ಪತ್ರಿಕೆಗಳಲ್ಲಿ ಪ್ರಕಟವಾಗುವ ಮಾಹಿತಿಗಳನ್ನು ಕಂಪ್ಯೂಟರ್‌ನಲ್ಲಿಯೇ ಪರಸ್ಪರ ಹೋಲಿಸುವುದು, ಹುಡುಕುವುದು, ವಿನಿಮಯ ಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಪ್ರಪಂಚದ ಮಟ್ಟಿಗೆ ಹೇಳುವುದಾದರೆ ಭಾರತೀಯ ಭಾಷೆಗಳ ಜೊತೆ, ಚೀನಾ, ಜಪಾನ್, ಅರೇಬಿಯಾ ಹಾಗೂ ಯುರೋಪಿನ ಭಾಷೆಗಳು, ಹೀಗೆ ನೂರಾರು ಭಾಷೆಗಳಿಗೆ ಸ್ಥಾನ ಕಲ್ಪಿಸಿ ಕೊಡಬೇಕಾಗುತ್ತದೆ. ಯುನಿಕೋಡ್ ಎಂಬುದು universal, uniform, uinique ಮತ್ತು code (ಸಂಕೇತ) ಎಂಬ ಪದಗಳನ್ನು ಸೂಚಿಸುತ್ತದೆ. ಪ್ರಪಂಚಕ್ಕೆಲ್ಲಾ ಒಂದೇ ಸಂಕೇತ ವಿಧಾನ ಇರಬೇಕು. ಪ್ರಪಂಚದ ಪ್ರತಿ ಭಾಷೆಯ ಪ್ರತಿಯೊಂದು ಅಕ್ಷರಕ್ಕೂ ತನ್ನದೇ ಆದ ಪ್ರತ್ಯೇಕ ಸಂಕೇತ ಇರಬೇಕು. ಈ ಎಲ್ಲ ಬೇಕುಗಳಿಗೆ ಉತ್ತರವೇ ಯುನಿಕೋಡ್. ಯುನಿಕೋಡ್‌ನಲ್ಲಿ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಶ್ರೇಣಿ ಇದೆ. ಇದು ಭಾರತೀಯ ಭಾಷೆಗಳಿಗೂ ಅನ್ವಯಿಸುತ್ತದೆ. ಯುನಿಕೋಡ್ ವಿಧಾನದಲ್ಲಿ ಮಾಹಿತಿ ಸಂಗ್ರಹಣೆ ಮಾಡಿದರೆ ಒಂದೇ ಕಡತದಲ್ಲಿ ಪ್ರಪಂಚದ ಎಲ್ಲ ಭಾಷೆಗಳಲ್ಲಿ ಮಾಹಿತಿಯನ್ನು ಶೇಖರಣೆ ಮಾಡಲು ಸಾಧ್ಯ. ಗ್ರಂಥಾಲಯವೊಂದರಲ್ಲಿ ಭಾರತದ ಎಲ್ಲ ಭಾಷೆಯ ಪುಸ್ತಕಗಳಿದ್ದಲ್ಲಿ ಅವುಗಳ ವಿವರಗಳ ದತ್ತಸಂಚಯ (database) ತಯಾರಿಸಬೇಕಾದರೆ ಯುನಿಕೋಡ್ ವಿಧಾನದಿಂದ ಮಾತ್ರ ಸಾಧ್ಯ.

ಯುನಿಕೋಡ್‌ನಲ್ಲಿ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಗಳಿರುವುದು ಮಾತ್ರವಲ್ಲ, ಪ್ರತಿ ಭಾಷೆಗೂ ತನ್ನದೇ ಆದ ಅಕಾರಾದಿ ವಿಂಗಡಣೆಯ ಸೂತ್ರವೂ ಯುನಿಕೋಡ್‌ನಲ್ಲಿದೆ. ಮಾಹಿತಿಯನ್ನು ಅಕ್ಷರಶೈಲಿಯ ಸಂಕೇತಗಳ ಬದಲಿಗೆ ಮೂಲ ಮಾಹಿತಿಯಾಗಿಯೇ ಕಳುಹಿಸುವುದರಿಂದ ಮಾಹಿತಿ ಸಂವಹನೆಯಲ್ಲಿ ಯಾವ ತೊಡಕೂ ಇಲ್ಲ. ಮೈಕ್ರೋಸಾಫ್ಟ್ ನವರ ವಿಂಡೋಸ್ ಎಕ್ಸ್.ಪಿ. ಮತ್ತು ಸರ್ವರ್ ೨೦೦೩ ಹಾಗೂ ನಂತರದ ಕಾರ್ಯಾಚರಣೆ ವ್ಯವಸ್ಥೆಗಳಾದ (operating system) ವಿಂಡೋಸ್ ೮, ವಿಂಡೋಸ್ ೧೦, ವಿಂಡೋಸ್ ೧೧ರಲ್ಲಿ ಕನ್ನಡದ ಯುನಿಕೋಡ್ ಸವಲತ್ತನ್ನು ನೀಡಲಾಗಿದೆ. ಕನ್ನಡ ಲಿನೆಕ್ಸ್ ಉತ್ಸಾಹಿಗಳು ನೇರವಾಗಿ ಯುನಿಕೋಡನ್ನೇ ಬಳಸುತ್ತಿದ್ದಾರೆ.

ಕನ್ನಡದ ಪಠ್ಯವು ಯುನಿಕೋಡ್‌ನಲ್ಲಿದ್ದರೆ ಮಾಹಿತಿ ಹುಡುಕುವುದು ಅತಿ ಸುಲಭ. ಕಂಪ್ಯೂಟರ್‌ನಲ್ಲಿ ಮೊದಲು ಕನ್ನಡಕ್ಕೆ ತನ್ನದೇ ಸ್ವತಂತ್ರ ಸ್ಥಾನಮಾನ ಇರಲಿಲ್ಲ. ಈಗ ಆ ಪರಿಸ್ಥಿತಿ ಇಲ್ಲ. ಯುನಿಕೋಡ್ ಬಂದ ನಂತರ ಕನ್ನಡಕ್ಕೆ ತನ್ನದೇ ಆದ ಸ್ಥಾನ ದೊರೆತಿದೆ. ಯುನಿಕೋಡ್ ಸಂಕೇತ ವಿಧಾನ ಬಳಕೆಗೆ ಬಂದಾಗ ಇಮೇಲ್ ಕಳುಹಿಸುವುದು, ಜಾಲತಾಣಗಳಿಗೆ–ಬ್ಲಾಗ್‌ಗಳಿಗೆ ಮಾಹಿತಿ ಸೇರಿಸುವುದು, ಅವನ್ನು ಓದುವುದು, ಕನ್ನಡದ ಮಾಹಿತಿಯನ್ನು ಸರ್ಚ್ ಇಂಜಿನ್‌ಗಳಲ್ಲಿ ಕನ್ನಡದಲ್ಲೇ ಹುಡುಕುವುದು – ಇದೆಲ್ಲವನ್ನೂ ನಿರ್ದಿಷ್ಟ ತಂತ್ರಾಂಶದ ಮೇಲೆ ಅವಲಂಬಿತರಾಗದೆ ಮಾಡಲು ಸಾಧ್ಯವಾಗಿಸಿದ್ದು ಯುನಿಕೋಡ್. ಈಗ ಭಾಷೆಯೊಂದರ ಅಕ್ಷರಗಳನ್ನು ಕಂಪ್ಯೂಟರ್‌ನಲ್ಲಿ ಪ್ರತಿನಿಧಿಸುವ 'ಯುನಿಕೋಡ್ ಸಂಕೇತೀಕರಣ ವ್ಯವಸ್ಥೆ'ಯು ವಿಶ್ವಮಟ್ಟದಲ್ಲಿ ಜಾರಿಯಾಗಿದೆ. ಇದರಿಂದಾಗಿ, ಭಾರತೀಯ ಭಾಷೆಗಳು ಮಾತ್ರವಲ್ಲ ಜಗತ್ತಿನ ಎಲ್ಲ ಭಾಷೆಗಳ ಜೊತೆ ಕನ್ನಡವೂ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಜಗತ್ತಿನ ಎಲ್ಲ ಭಾಷೆಗಳ ಎನ್ಕೋಡಿಂಗ್‌ಗೆ ಅವಕಾಶವಿರುವ ಶಿಷ್ಟತೆ ಅಥವಾ ಮಾನಕ ಈ 'ಯುನಿಕೋಡ್ ಸಂಕೇತೀಕರಣ'. ಕಂಪ್ಯೂಟರ್‌ನಲ್ಲಿ ಜಗತ್ತಿನ ಎಲ್ಲ ಭಾಷೆಗಳ ಪ್ರತಿ ಅಕ್ಷರಕ್ಕೂ ಸಂಕೇತ ನೀಡುವ ವ್ಯವಸ್ಥೆಯನ್ನು 'ಯುನಿಕೋಡ್ ಸಂಕೇತೀಕರಣ ವ್ಯವಸ್ಥೆ' ಎನ್ನಲಾಗಿದೆ. ಇದರ ವೈಶಿಷ್ಟ್ಯವೆಂದರೆ ಜಗತ್ತಿನ ಎಲ್ಲ ಭಾಷೆಗಳಿಗೂ ಇದರಲ್ಲಿ ಪ್ರತ್ಯೇಕ ಸ್ಥಾನವನ್ನು ನೀಡಲಾಗಿದೆ. ಅಂದರೆ ಆಸ್ಕಿ ಮಾನಕದಲ್ಲಿ ಇದ್ದಂತೆ, ಇಂಗ್ಲಿಷ್‌ನ ಜಾಗದಲ್ಲಿ ಕನ್ನಡ ಭಾಷೆಯನ್ನು ಕೂರಿಸಬೇಕಾಗಿಲ್ಲ. ಈಗ ಯುನಿಕೋಡ್ ನಿಂದಾಗಿ ಕನ್ನಡಕ್ಕೆ ಕಂಪ್ಯೂಟರ್‌ನಲ್ಲಿ ತನ್ನದೇ ಸ್ವತಂತ್ರವಾದ ಸ್ಥಾನಮಾನಗಳು ದೊರೆತಿವೆ.

ಮಾಹಿತಿ ತಂತ್ರಜ್ಞಾನದಲ್ಲಿ 'ಯುನಿಕೋಡ್ ಅನ್ನು ಕನ್ನಡದ ಶಿಷ್ಟತೆಯೆಂದು ಅಧಿಸೂಚನೆ ಹೊರಡಿಸಬೇಕು ಕನ್ನಡದ ಎಲ್ಲ ವೆಬ್‌ಸೈಟ್‌ಗಳೂ ಯುನಿಕೋಡ್‌ನಲ್ಲೇ ಇರುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು'. ಕರ್ನಾಟಕ ಸರಕಾರವೂ ಕನ್ನಡಕ್ಕೆ ಯುನಿಕೋಡ್ ಶಿಷ್ಟತೆಯನ್ನು ಕಡ್ಡಾಯವೆಂದು ಪ್ರಕಟಿಸುವಂತಾದರೆ ಒಳ್ಳೆಯದು. ಸರಕಾರದ ಎಲ್ಲ ಜಾಲತಾಣಗಳೂ ಕನ್ನಡದಲ್ಲಿ – ಅದರಲ್ಲೂ ಯುನಿಕೋಡ್‌ನಲ್ಲಿ – ಇರುವಂತೆ ಮಾಡುವುದು ಮತ್ತು ಅವುಗಳಲ್ಲಿರುವ ಮಾಹಿತಿ ಆಗಿಂದಾಗ್ಗೆ ಅಪ್ಡೇಟ್ ಆಗುತ್ತಿರುವಂತೆ ನೋಡಿಕೊಂಡರೆ ಇನ್ನೂ ಒಳ್ಳೆಯದು. ತಮಗೆ ಬೇಕಾದ ಯಾವುದೇ ಮಾಹಿತಿಯನ್ನು ಯಾರು ಯಾವಾಗ ಬೇಕಿದ್ದರೂ ಸುಲಭವಾಗಿ ಹುಡುಕಿಕೊಳ್ಳುವುದು ಇದರಿಂದ ಸಾಧ್ಯವಾಗುತ್ತದೆ. ಸರಕಾರದ ತಾಣಗಳಷ್ಟೇ ಅಲ್ಲ, ಎಲ್ಲ ಪತ್ರಿಕೆಗಳ ಜಾಲತಾಣಗಳೂ ಯುನಿಕೋಡ್‌ನಲ್ಲಿದ್ದರೆ ಗೂಗಲ್ ನ್ಯೂಸ್‌ನಂತಹ ಸೇವೆಗಳಲ್ಲಿ ಕನ್ನಡಕ್ಕೆ ಸ್ಥಾನ ಬೇಕೆಂಬ ಬಹುದಿನಗಳ ಬೇಡಿಕೆಗೂ ಇನ್ನಷ್ಟು ಬಲ ಬರುತ್ತದೆ. ಕೊನೆಗೂ ಈ ಅಧಿಸೂಚನೆ ಹೊರಟಿದೆ. ಇನ್ನು ಮುಂದೆ ಸರಕಾರದ ಎಲ್ಲ ಕೆಲಸ ಕಾರ್ಯಗಳಲ್ಲಿ ಕನ್ನಡ ಭಾಷೆಯನ್ನು ಮಾಹಿತಿ ತಂತ್ರಜ್ಞಾನದ ಮೂಲಕ ಬಳಕೆ ಮಾಡುವಾಗ ಯುನಿಕೋಡ್ ವಿಧಾನದಲ್ಲೇ ಮಾಡತಕ್ಕದ್ದು. ಇದು ಕೇವಲ ಗಣಕಗಳಿಗೆ ಮಾತ್ರವಲ್ಲ, ಎ.ಟಿ.ಎಂ., ಮೊಬೈಲ್, ಅಂತರ್ಜಾಲ ತಾಣ, ಪತ್ರ ವ್ಯವಹಾರ, ಪತ್ರಿಕಾ ಪ್ರಕಟಣೆ – ಹೀಗೆ ಎಲ್ಲ ಅಂಗಗಳಿಗೂ ಅನ್ವಯಿಸುತ್ತದೆ.

**ಯುನಿಕೋಡ್ ಫಾಂಟುಗಳು**

ಯುನಿಕೋಡ್ ಫಾಂಟ್‌ಗಳು ಬಳಕೆಗೆ ಬಂದ ನಂತರ ಕನ್ನಡವನ್ನು ಸಮಗ್ರವಾಗಿ ಕಂಪ್ಯೂಟರ್‌ನಲ್ಲಿ ಬಳಸಲು ಹಿಂದೆ ಇದ್ದ ಬಹುತೇಕ ತಂತ್ರಜ್ಞಾನದ ಸಮಸ್ಯೆಗಳು ಪರಿಹಾರ ಕಂಡವು. ಹೀಗಾಗಿ ಇಂದು ಡೇಟಾಬೇಸ್ ಅಪ್ಲಿಕೇಷನ್‌ಗಳಲ್ಲಿ ಕೂಡ ಕನ್ನಡದ

ಪಠ್ಯವನ್ನು ಸುಲಭವಾಗಿ ಬಳಸಲು ಸಾಧ್ಯವಾಗಿದೆ. ಕನ್ನಡದಲ್ಲಿಯೇ ವೆಬ್‌ಸೈಟ್‌ಗಳನ್ನು ನಿರ್ಮಿಸುವ ಸೌಲಭ್ಯ ದೊರೆತಿದೆ. ಹಾಗೆಯೇ ಬ್ಲಾಗ್, ಇಮೇಲ್ ಮತ್ತು ಚಾಟಿಂಗ್‌ಗಳಲ್ಲಿ ಕನ್ನಡ ಭಾಷೆಯನ್ನು ಹಾಸುಹೊಕ್ಕಾಗಿ ಬಳಸಲಾಗುತ್ತಿದೆ.

ಯುನಿಕೋಡ್ ಫ಼ಾಂಟ್ ಬಳಕೆಯಿಂದಾಗಿ ಕನ್ನಡದ ಲಿಪಿಗಳು ವಿಚಿತ್ರಲಿಪಿಗಳಾಗಿ ಅಂದರೆ ಜಂಕ್ ಕ್ಯಾರೆಕ್ಟರ್‌ಗಳಾಗಿ ಕಾಣಿಸುವ ಸಮಸ್ಯೆಗಳು ಇಲ್ಲವಾಗಿದೆ.

**ಯುನಿಕೋಡ್ ಫ಼ಾಂಟುಗಳ ಅನುಕೂಲಗಳು**

ಪಠ್ಯವು ಯುನಿಕೋಡ್ ಫ಼ಾಂಟ್‌ನಲ್ಲಿದ್ದರೆ, ಹುಡುಕುವುದು ಸುಲಭ. ಕಾರಣವೇನೆಂದರೆ, ಯುನಿಕೋಡ್ ಸೌಲಭ್ಯದಿಂದಾಗಿ ಗೂಗಲ್ ಬಳಸಿ ಕನ್ನಡದ ಪಠ್ಯವನ್ನು ಸುಲಭವಾಗಿ ಹುಡುಕಬಹುದು. ಯುನಿಕೋಡ್‌ನಿಂದಾಗಿ ಕನ್ನಡದ ವಿಚಿತ್ರಲಿಪಿಗಳ ಸಮಸ್ಯೆ ಪರಿಹಾರ ವಾಗಿದೆ. ಕಾರ್ಯಾಚರಣೆ ವ್ಯವಸ್ಥೆಯ ಹಂತದಲ್ಲಿಯೇ ಕಂಪ್ಯೂಟರ್ ಕನ್ನಡವನ್ನು ಗುರುತಿಸುತ್ತದೆ. ಹೀಗಾಗಿ, ಯಾವುದೇ ಅಪ್ಲಿಕೇಷನ್ ತಂತ್ರಾಂಶಗಳಲ್ಲಿ ಇಂಗ್ಲಿಷ್‌ನಷ್ಟೇ ಸುಲಭವಾಗಿ ಕನ್ನಡವನ್ನು ಸಹ ಬಳಸಬಹುದು.

**ಕಠಿಣ ಪದಗಳು**

೧. ಗಣಕೀಕರಣ

೨. ಎನ್ಕೋಡಿಂಗ್

೩. ಸಂಕೇತಶ್ರೇಣಿ

೪. ಶಿಷ್ಟತೆ

೫. ದತ್ತಸಂಚಯ

೬. ಸೈಬರ್

**ಅಭ್ಯಾಸ ೩**

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಯುನಿಕೋಡ್ ಎಂದರೇನು?

೨. ANSI ಯ ಬಗ್ಗೆ ಬರೆಯಿರಿ.

೩. ಯುನಿಕೋಡ್ ಕನ್ಸೋರ್ಟಿಯಂ ಎಂದರೇನು? ಅದರ ಕಾರ್ಯ ತಿಳಿಸಿ.

೪. ಕನ್ನಡಕ್ಕೆ ಯುನಿಕೋಡ್‌ನ ಕೊಡುಗೆ.

೫. ಯುನಿಕೋಡ್‌ನ ವಿಸ್ತೃತ ರೂಪ ಬರೆಯಿರಿ.

## ೧೨.೫. ಸಾಮಾಜಿಕ ಸಂವಹನ

ಸಂವಹನ ಎಂಬ ಪದವು ಇಂಗ್ಲಿಷಿನ 'ಕಮ್ಯುನಿಕೇಷನ್' ಎಂಬ ಪದಕ್ಕೆ ಸಮಾನ ಅರ್ಥವನ್ನು ನೀಡುವ ಕನ್ನಡದ ಪದವಾಗಿದೆ. ಕಮ್ಯುನಿಕೇಷನ್ ಪದದ ಮೂಲ ಲ್ಯಾಟಿನ್ ಭಾಷೆಯಲ್ಲಿದ್ದು, ಕಮ್ಯುನಿಕೇರ್ ಎಂಬ ಲ್ಯಾಟಿನ್ ಪದದಿಂದ ಉತ್ಪತ್ತಿಯಾಗಿರುತ್ತದೆ. ಹಂಚಿಕೊ ಎಂಬ ಅರ್ಥವನ್ನು ನೀಡುವ ಲ್ಯಾಟಿನ್ ಭಾಷೆಯ 'ಕಮ್ಯುನಿಕೇರ್' ಪದವು

ignou THE PEOPLE'S UNIVERSITY

ನಾವು ಕನ್ನಡದಲ್ಲಿ ಬಳಸುವ ಸಂವಹನ ಪದದ ಅರ್ಥಕ್ಕೆ ಸಮಾನಾಂತರ ಅರ್ಥವನ್ನು ಹೊಂದಿರುತ್ತದೆ. ಕನಿಷ್ಠ ಇಬ್ಬರು ಭಾಗವಹಿಸುವವರನ್ನು ಒಳಗೊಂಡ ಸಾಮಾಜಿಕ ಕ್ರಿಯೆಯನ್ನು ಸಂವಹನ ಎಂದು ಕರೆಯಲಾಗುತ್ತದೆ. ಸಾಮಾಜಿಕ ಮಾಧ್ಯಮವೆಂದರೆ ವರ್ಚುವಲ್ ಸಮುದಾಯಗಳು ಮತ್ತು ನೆಟ್‌ವರ್ಕ್‌ಗಳಲ್ಲಿ ಜನರು ಮಾಹಿತಿ ಮತ್ತು ಆಲೋಚನೆಗಳನ್ನು ರಚಿಸುವ, ಹಂಚಿಕೊಳ್ಳುವ ಅಥವಾ ವಿನಿಮಯ ಮಾಡುವ ಸಾಮಾಜಿಕ ಸಂವಹನ. ಆಂಡ್ರಿಯಾಸ್ ಕಪ್ಲಾನ್ ಮತ್ತು ಮೈಕೆಲ್ ಹೆನ್ಲೈನ್ ಅವರು ಸಾಮಾಜಿಕ ಮಾಧ್ಯಮವನ್ನು 'ವೆಬ್ ೨.೦ನ ಸೈದ್ಧಾಂತಿಕ ಮತ್ತು ತಾಂತ್ರಿಕ ಅಡಿಪಾಯಗಳ ಮೇಲೆ ನಿರ್ಮಿಸುವ ಮತ್ತು ಬಳಕೆದಾರ-ರಚಿತ ವಿಷಯದ ರಚನೆ ಮತ್ತು ವಿನಿಮಯಕ್ಕೆ ಅನುವು ಮಾಡಿಕೊಡುವ ಇಂಟರ್ನೆಟ್ ಆಧಾರಿತ ಅಪ್ಲಿಕೇಷನ್‌ಗಳ ಗುಂಪು' ಎಂದು ವ್ಯಾಖ್ಯಾನಿಸಿದ್ದಾರೆ. ಇದಲ್ಲದೆ, ಬಳಕೆದಾರರು ಮತ್ತು ಸಮುದಾಯಗಳು ಬಳಕೆದಾರ-ರಚಿಸಿದ ವಿಷಯವನ್ನು ಹಂಚಿಕೊಳ್ಳಲು, ಸಹ-ರಚಿಸಲು, ಚರ್ಚಿಸಲು ಮತ್ತು ಮಾರ್ಪಡಿಸುವ ಮೂಲಕ ಹೆಚ್ಚು ಸಂವಾದಾತ್ಮಕ ವೇದಿಕೆಗಳನ್ನು ರಚಿಸಲು ಸಾಮಾಜಿಕ ಮಾಧ್ಯಮ ಮೊಬೈಲ್ ಮತ್ತು ವೆಬ್ ಆಧಾರಿತ ತಂತ್ರಜ್ಞಾನಗಳನ್ನು ಅವಲಂಬಿಸಿದೆ. ಸಂಸ್ಥೆಗಳು, ಸಮುದಾಯಗಳು ಮತ್ತು ವ್ಯಕ್ತಿಗಳ ನಡುವಿನ ಸಂವಹನದಲ್ಲಿ ಅವರು ಗಣನೀಯ ಮತ್ತು ವ್ಯಾಪಕ ಬದಲಾವಣೆಗಳನ್ನು ಪರಿಚಯಿಸುತ್ತಾರೆ. ನಾವು ಇದೀಗ ಆನ್‌ಲೈನ್ ಸಾಮಾಜಿಕ ಮಾಧ್ಯಮ ಕ್ಷೇತ್ರದಲ್ಲಿ ಕುಟುಂಬ, ಸ್ನೇಹಿತರು, ಸಂಸ್ಥೆಗಳು, ಸರ್ಕಾರಗಳು ಮತ್ತು ಒಟ್ಟು ಅಪರಿಚಿತರೊಂದಿಗೆ ಸಂವಹನ ನಡೆಸುತ್ತೇವೆ. ಅಂತರ್ಜಾಲದ ಹೆಚ್ಚಿನ ಭಾಗಗಳು ಸಾಮಾಜಿಕ ಮಾಧ್ಯಮ ತತ್ವಗಳನ್ನು ಅನುಸರಿಸುತ್ತಿವೆ ಅಥವಾ ಕನಿಷ್ಠ ಒಂದು ರೀತಿಯಲ್ಲಿ ಸಾಮಾಜಿಕ ನೆಟ್‌ವರ್ಕ್‌ಗಳನ್ನು ಬೆಂಬಲಿಸುತ್ತವೆ. ನಾವು ಇತರರಿಂದ ಕಲಿಯುತ್ತೇವೆ, ನಮಗೆ ಆಸಕ್ತಿಯುಂಟು ಮಾಡುವ ದೈನಂದಿನ ಸುದ್ದಿಗಳನ್ನು ಪಡೆದುಕೊಳ್ಳುತ್ತೇವೆ ಮತ್ತು ಲೇಖಕರು ಮತ್ತು ಸಮಾನ ಮನಸ್ಸಿನ ಬಳಕೆದಾರರೊಂದಿಗೆ ಸಂವಹನ ನಡೆಸುತ್ತೇವೆ.

ಸಂವಹನ ಪ್ರಕ್ರಿಯೆಯಲ್ಲಿ ವ್ಯಕ್ತಿಯು ತನ್ನಲ್ಲಿರುವ ಮಾಹಿತಿ ಭಾವನೆ, ಆಲೋಚನೆ, ಅಭಿಪ್ರಾಯಗಳನ್ನು ತನ್ನ ಸಹಸಂವಾದಿಯೊಂದಿಗೆ ಹಂಚಿಕೊಳ್ಳುತ್ತಾನೆ. ಹೀಗೆ ವ್ಯಕ್ತಿಯೊಬ್ಬ ತನ್ನೊಡನೆ ಸಂವಹನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ವ್ಯಕ್ತಿ, ಗುಂಪು ಅಥವಾ ಸಮೂಹದೊಡನೆ, ಇಬ್ಬರಿಗೂ ಅರ್ಥವಾಗುವಂತಹ ಚಿನ್ಹೆ ಅಥವಾ ಸಂಜ್ಞೆಗಳ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ನಾವು ಸಂವಹನ ಎಂದು ಕರೆಯುತ್ತೇವೆ. ಸರಳವಾಗಿ ಹೇಳುವುದಾದರೆ ವ್ಯಕ್ತಿಯೊಬ್ಬ ತನ್ನ ನೋವು-ನಲಿವುಗಳನ್ನು ಬೇರೊಬ್ಬರ ಜೊತೆ ಹಂಚಿಕೊಳ್ಳುವ ಪ್ರಕ್ರಿಯೆಗೆ ಸಂವಹನ ಎನ್ನಬಹುದಾಗಿರುತ್ತದೆ. ಹೀಗೆ ವ್ಯಕ್ತಿಯೊಬ್ಬ ತನ್ನ ನೋವು-ನಲಿವುಗಳನ್ನು ಹಂಚಿಕೊಳ್ಳಲು ಬಳಸುವ ಸಾಧನ ಅಂದರೆ ಮಾಧ್ಯಮ.

ಸಂವಹನವು ಸಾಮಾನ್ಯವಾಗಿ ಕೇಳುಗ ಮತ್ತು ಮಾತನಾಡುವವರನ್ನು ಆಧರಿಸಿದೆ. ಶೇಕಡಾವಾರು ಗಣನೆಯಲ್ಲಿ ಏರುಪೇರಾದರೂ ಈ ಎಲ್ಲಾ ಸಂವಹನ ಪ್ರಯತ್ನಗಳ ಉದ್ದೇಶವು ಒಂದೇ ಆಗಿರುತ್ತದೆ. ಹೀಗಾಗಿ ಹೆಚ್ಚಿನ ಸಂದರ್ಭದಲ್ಲಿ ಈ ಮೇಲಿನ ಅಂಕಿ ಅಂಶಗಳು ಸಾರ್ವತ್ರಿಕವಾಗಿ ಸಾಮಾನ್ಯವಾಗಿರುತ್ತವೆ. ಧ್ವನಿ, ರಾಗ ಅಥವಾ ಶ್ರುತಿ, ಸಂಜ್ಞಾಪದ್ಧತಿ ಅಥವಾ ಬರಹ ರೂಪದ ಸಂಕೇತಗಳ ವ್ಯವಸ್ಥೆಯ ಮೂಲಕ ಯೋಚನೆ-ವಿಚಾರಗಳು ಮತ್ತು ಅಭಿಪ್ರಾಯಗಳನ್ನು ತಿಳಿಸಬಹುದು. ಸಾಮಾಜಿಕ ಸಂವಹನವು ಸಾಮಾಜಿಕ

ವ್ಯಸನವನ್ನು ಆಧರಿಸಿದೆ. ಸಾಮಾಜಿಕ ಸಂವಹನವು ಸಾಮಾಜಿಕ ಸಂಪರ್ಕದ ಪ್ರಕಾರಗಳಲ್ಲಿ ಒಂದಾಗಿದೆ. ಎರಡು ಅಥವಾ ಹೆಚ್ಚಿನ ವ್ಯಕ್ತಿಗಳ ನಡುವೆ ಸಾಮಾಜಿಕ ಕ್ರಿಯೆಗಳ ವಿನಿಮಯದ ಪರಸ್ಪರ ನಿರ್ದೇಶನದ ಪ್ರಕ್ರಿಯೆಯೂ ಆಗಿದೆ.

ಸಾಮಾಜಿಕತೆಯು ಇತರೆ ಜನರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳುವುದರ ಮೂಲಕ ಮತ್ತು ಅವರ ಮಾಹಿತಿಯನ್ನು ಸ್ವೀಕರಿಸುವ ಮೂಲಕ ಸಂವಹನವನ್ನು ಸೂಚಿಸುತ್ತದೆ. 'ಮಾಧ್ಯಮವು' ಅಂತರ್ಜಾಲದಂತೆಯೇ ಸಂವಹನ ಸಾಧನವನ್ನು ಸೂಚಿಸುತ್ತದೆ (ಟಿ.ವಿ., ರೇಡಿಯೊ ಮತ್ತು ಪತ್ರಿಕೆಗಳು ಹೆಚ್ಚು ಸಾಂಪ್ರದಾಯಿಕ ಮಾಧ್ಯಮಗಳ ಉದಾಹರಣೆ ಗಳಾಗಿವೆ).

ಸಾಮಾಜಿಕ ಮಾಧ್ಯಮವು ವೆಬ್ ಆಧಾರಿತ ಸಂವಹನ ಸಾಧನವಾಗಿದ್ದು, ಜನರು ಪರಸ್ಪರ ಹಂಚಿಕೊಳ್ಳುವ ಮತ್ತು ಉಪಯೋಗಿಸುವ ಮಾಹಿತಿಯ ಮೂಲಕ ಪರಸ್ಪರ ಸಂವಹನ ನಡೆಸಲು ಸಾಧ್ಯವಾಗುತ್ತದೆ. ಹೌದು, ಇದು ವಿಶಾಲವಾದ ವ್ಯಾಖ್ಯಾನವಾಗಿದೆ. ಆದರೆ ಸಾಮಾಜಿಕ ಮಾಧ್ಯಮವು ಬಹಳ ವಿಶಾಲವಾದ ಪದವಾಗಿದೆ. ಸಾಮಾಜಿಕ ಮಾಧ್ಯಮದ ಹೆಚ್ಚು ನಿರ್ದಿಷ್ಟವಾದ ಉಪವಿಭಾಗದಲ್ಲಿ ಮಾಹಿತಿಯನ್ನು ನಾವು ಹೆಚ್ಚು ಕಳೆದುಕೊಳ್ಳದೇ ಪಡೆಯಬಹುದು ಎಂದು ಇದು ನಿರ್ದಿಷ್ಟವಾಗಿ ಸ್ಪಷ್ಟಪಡಿಸುತ್ತದೆ. ಸರಿಯಾದ ಸಮಯದಲ್ಲಿ ಮಹತ್ವದ ವಿಷಯಗಳನ್ನು ಜನರಿಗೆ ಮುಟ್ಟಿಸುವ ಕೆಲಸವನ್ನು ಸಾಮಾಜಿಕ ಮಾಧ್ಯಮಗಳು ಮಾಡುತ್ತಿದೆ. ಜನರ ಕಷ್ಟಗಳಿಗೆ ಸ್ಪಂದಿಸಿ ಆದಷ್ಟು ಜನರ ಹಿತವನ್ನು ಬಯಸುತ್ತಾ ಸಹಾಯ ಮಾಡುತ್ತಾ ಬಂದಿವೆ. ೨೦ ವರ್ಷದ ಯುವಕರಿಂದ ೬೦ ವರ್ಷದ ವಯಸ್ಕರವರೆಗೂ ಸಾಮಾಜಿಕ ಜಾಲತಾಣ ಒಂದು ಅವಿಭಾಜ್ಯ ಅಂಗವಾಗಿದೆ. ವಿಶ್ವದಾದ್ಯಂತ ಯಾವುದೇ ಮೂಲೆಯಲ್ಲಿರುವ ತಮ್ಮ ಸಂಬಂಧಿಕರೊಡನೆ ಅಥವಾ ಸ್ನೇಹಿತರೊಡನೆ ಸಂವಹನ ನಡೆಸುವ ಒಂದು ವಿಶೇಷ ವೇದಿಕೆಯಾಗಿ ಇದು ಕಾರ್ಯ ನಿರ್ವಹಿಸುತ್ತಿದೆ. ಪ್ರತಿ ವರ್ಷ ಜೂನ್ ೩೦ನೆಯ ತಾರೀಕಿನಂದು ವಿಶ್ವ ಸಾಮಾಜಿಕ ಮಾಧ್ಯಮ ದಿನವನ್ನಾಗಿ ಆಚರಿಸಲಾಗುತ್ತದೆ.

ಜಗತ್ತಿನ ಮೂಲೆ ಮೂಲೆಯಲ್ಲಿರುವ ಜನರನ್ನು ಸಂಪರ್ಕಿಸುವುದರಿಂದ ಹಿಡಿದು ಜನರಿಗೆ ಮಾಹಿತಿಯನ್ನು ಅಥವಾ ಪತ್ರಕರ್ತರಿಗೆ ಸುದ್ದಿಯನ್ನು ನೀಡಲು ಸಾಮಾಜಿಕ ಜಾಲತಾಣ ಸಹಾಯಕವಾಗಿದೆ. ಪ್ರಸ್ತುತದಲ್ಲಿ ಕೊರೊನಾ ಸಾಂಕ್ರಾಮಿಕ ಸಮಯದಲ್ಲಿ ಕಷ್ಟದಲ್ಲಿರುವ ಜನರಿಗೆ ಸಹಾಯವಾಣಿಯಾಗಿಯೂ ಅದು ಕೆಲಸ ನಿರ್ವಹಿಸಿದೆ.

ವಿಶ್ವದ ಯಾವುದೇ ಮೂಲೆಯಲ್ಲಿ ನಡೆದ ಘಟನೆಯನ್ನು ನಾವು ಕುಳಿತಿರುವಲ್ಲಿಯೇ ತಿಳಿಸುವುದು ಸಾಮಾಜಿಕ ಮಾಧ್ಯಮದ ಮಹತ್ವ. ಇದು ನಮ್ಮ ಕಾಲದ ಒಂದು ದೊಡ್ಡ ಆಧುನಿಕ ವಿದ್ಯಮಾನವಾಗಿದೆ. ಜನರು ಯಾವ ಮಾಧ್ಯಮವನ್ನು ಬಳಸುತ್ತಾರೆ ಎಂಬುದನ್ನು ನಿಯಂತ್ರಿಸಲು ಇದು ಅನುಕೂಲಿಸುತ್ತದೆ. ಅವರು ಕಲಿಯಲು ಬಯಸುವ ವಿಷಯಗಳನ್ನು ಕಲಿಯಲು ಮತ್ತು ಅವರ ಆಲೋಚನೆಗಳನ್ನು ಅವರಂತೆ ಯೋಚಿಸುವ ಜನರಿಗೆ ತಲುಪಿಸಲು ಅಥವಾ ಅವರ ಆಲೋಚನೆಗಳನ್ನು ಓದುವುದರ ಮೂಲಕ ಆನಂದಿಸಲು ಇದು ಅವಕಾಶ ಮಾಡಿಕೊಡುತ್ತದೆ. ಮೂಲತಃ ಸಾಮಾಜಿಕ ಮಾಧ್ಯಮವು ಅನೇಕ ರೀತಿಯ ಸಂವಹನ, ಸಹಕಾರ ಮತ್ತು ಇತರರಿಗೆ ಸಹಾಯ ಮಾಡಲು ಅನುವು ಮಾಡಿಕೊಡುತ್ತದೆ.

**ಸಾಮಾಜಿಕ ಸಂಪರ್ಕ ತಾಣಗಳು**

ಸಾಮಾಜಿಕ ಸಂಪರ್ಕ ತಾಣಗಳು ಈಗ ಯುವ ಜನತೆಯಲ್ಲಿ, ಉದ್ಯೋಗಿಗಳಲ್ಲಿ ಮತ್ತು ಉದ್ದಿಮೆಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಮತ್ತು ಹೆಚ್ಚು ಬಳಸಲ್ಪಡುತ್ತಿರುವ ಸಂಪರ್ಕ ತಾಣಗಳಾಗಿವೆ. ಇವುಗಳಲ್ಲಿ ನಮ್ಮ ಪ್ರೊಫೈಲ್ ರಚಿಸಿಕೊಳ್ಳಬಹುದು, ಸ್ನೇಹಿತರನ್ನು ಹೊಂದಬಹುದು, ಹೊಸ ಗುಂಪುಗಳನ್ನು ರಚಿಸಬಹುದು ಮತ್ತು ಸೇರಿಕೊಳ್ಳಬಹುದು. ಇಷ್ಟೇ ಅಲ್ಲದೇ ಸುದ್ದಿಗಳನ್ನು, ಮನರಂಜನೆಯ ಮಾಹಿತಿಗಳನ್ನು ಹಂಚಿಕೊಳ್ಳಬಹುದು ಮತ್ತು ಅವುಗಳಿಗೆ ಪ್ರತಿಕ್ರಿಯೆ ನೀಡಬಹುದು. ಇದಕ್ಕೆ ಉದಾಹರಣೆ ಎಂದರೆ ಫೇಸ್‌ಬುಕ್, ಆರ್ಕುಟ್, ಗೂಗಲ್ ಪ್ಲಸ್ ಮುಂತಾದ ಸಂಪರ್ಕ ತಾಣಗಳು. ಇದಷ್ಟೇ ಅಲ್ಲದೇ ಪ್ರತಿಯೊಬ್ಬರೂ ತಮ್ಮ ದೇಶ, ಭಾಷೆ, ಊರು, ಆಸಕ್ತಿ ಮುಂತಾದ ಸಂಗತಿಗಳ ಕುರಿತು ತಮ್ಮದೇ ಆದ ಸಾಮಾಜಿಕ ಸಂಪರ್ಕ ತಾಣಗಳನ್ನು, ಗುಂಪುಗಳನ್ನು ರಚಿಸಿಕೊಳ್ಳಬಹುದು.

**ಸೋಶಿಯಲ್ ಬುಕ್‌ಮಾರ್ಕಿಂಗ್ ತಾಣಗಳು**

ಈ ತಾಣದಲ್ಲಿ ನಾವು ಹೆಚ್ಚಾಗಿ ಬಳಸುವ ಅಥವಾ ಇಷ್ಟವಾದ ಇತರೆ ತಾಣಗಳನ್ನು ಬುಕ್‌ಮಾರ್ಕ್ ಮಾಡಬಹುದು ಮತ್ತು ನಮ್ಮ ಆಸಕ್ತಿಗೆ ತಕ್ಕಂತೆ ಬುಕ್‌ಮಾರ್ಕ್ ಮಾಡಿದ ತಾಣಗಳನ್ನು ನೋಡಬಹುದು.

**ಸಾಮಾಜಿಕ ಸುದ್ದಿ ತಾಣಗಳು**

ಇವುಗಳಲ್ಲಿ ಸುದ್ದಿಗಳು ಮತ್ತು ಲೇಖನಗಳನ್ನು ಓದಬಹುದು ಮತ್ತು ಅವುಗಳಿಗೆ ಮತ ನೀಡುವ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮೂಲಕ ಚರ್ಚೆ ಮಾಡಬಹುದು.

**ಉದ್ಯೋಗ ಮತ್ತು ವ್ಯವಹಾರ**

ಸಾಮಾಜಿಕ ಮಾಧ್ಯಮಗಳಲ್ಲಿ ಉದ್ಯೋಗಗಳನ್ನು ಮತ್ತು ಉದ್ಯೋಗಾಕಾಂಕ್ಷಿಗಳನ್ನು ಹುಡುಕುವುದು ಸುಲಭವಾಗಿದೆ. ಅರೆಕಾಲಿಕ ಮತ್ತು ಮನೆಯಿಂದಲೇ ಮಾಡಬಹುದಾದ ಉದ್ಯೋಗಗಳ ಅವಕಾಶಗಳನ್ನು ಹುಡುಕುವುದು ಈ ಸಾಮಾಜಿಕ ಮಾಧ್ಯಮಗಳ ಸಹಾಯದಿಂದಾಗಿ ಸುಲಭವಾಗಿದೆ. ಉದ್ಯೋಗವನ್ನರಸುವವರು, ವೃತ್ತಿನಿರತರು ಸಂಪರ್ಕಗಳನ್ನು ಬೆಳೆಸಿಕೊಳ್ಳಲು ಮತ್ತು ಚರ್ಚಿಸಲು ಬ್ರಾಂಚ್‌ಔಟ್, ಲಿಂಕ್ಡ್‌ಇನ್ ಮುಂತಾದ ತಾಣಗಳು ಸಹಾಯ ಮಾಡುತ್ತವೆ. ಇನ್ನು ಸಣ್ಣ ಉದ್ದಿಮೆಗಳನ್ನು ಪ್ರಾರಂಭಿಸುವವರಿಗೆ ತಮ್ಮ ಉದ್ದಿಮೆಯ ಕುರಿತು, ತಾವು ನೀಡುವ ಸೇವೆಗಳ ಕುರಿತು ಜನರಿಗೆ ತಿಳಿಸಲು, ತಮ್ಮ ಉದ್ದಿಮೆ, ಕಂಪನಿಗಳಿಗೆ ಪ್ರಚಾರ ಪಡೆದುಕೊಳ್ಳಲು ಇದು ಸುಲಭ ಮತ್ತು ಉಚಿತವಾದ ಅವಕಾಶವಾಗಿದೆ. ಈ ರೀತಿಯಾಗಿ ಯಾವುದೇ ತಾಣದಲ್ಲಿ ಬಳಕೆದಾರರು ಸಂವಹನ ಮಾಡಲು ಸಾಧ್ಯವಿದೆಯೋ ಅವುಗಳನ್ನೆಲ್ಲ ಸಾಮಾಜಿಕ ಮಾಧ್ಯಮ ತಾಣಗಳು ಎಂದು ಕರೆಯಬಹುದು. ಸಾಮಾಜಿಕ ಮಾಧ್ಯಮಗಳ ಪರಿಚಯ ಮತ್ತು ಬಳಕೆ ಇತ್ತೀಚಿನ ಜೀವನದಲ್ಲಿ ಅತ್ಯಂತ ಅಗತ್ಯವಾಗಿದೆ. ಅಷ್ಟೇ ಅದನ್ನು ಹಿತಮಿತವಾಗಿಯೂ ಬಳಸುವುದು ಅನಿವಾರ್ಯವಾಗಿದೆ.

**ಸಾಮಾಜಿಕ ಮಾಧ್ಯಮಗಳು**

ಅಂತರ್ಜಾಲದ ಆಗಮನದೊಡನೆ ಮಾಹಿತಿ ಮಹಾಪೂರವೇ ಹರಿಯತೊಡಗಿದೆ. ಕೇವಲ ಒಂದು ದಿಕ್ಕಿನ ಮಾಹಿತಿ ಹರಿಯುವಿಕೆ ಸಾಕಾಗುತ್ತಿಲ್ಲ ಎನ್ನುವ ಹಾಗೆ ಸಂಭಾಷಣೆ,

ಚರ್ಚೆಗಳೂ ಸಹಿತ ಪ್ರಾರಂಭವಾಗಿವೆ. ಅದಷ್ಟೇ ಅಲ್ಲ, ಪ್ರತಿಯೊಬ್ಬರಿಗೂ ತಮ್ಮದೇ ಆದ ಆನ್‌ಲೈನ್ ಐಡೆಂಟಿಟಿ ಮತ್ತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿಕೊಳ್ಳುವ ಅವಕಾಶಗಳು ದೊರೆಯತೊಡಗಿವೆ. ಇತ್ತೀಚೆಗೆ ಸೋಷಿಯಲ್ ಮೀಡಿಯಾ ಅಂತರ್ಜಾಲ ಬಳಕೆದಾರರ ಅವಶ್ಯಕತೆ ಇರುವುದಷ್ಟೇ ಅಲ್ಲ ಅವು ಒಂದಿಡೀ ಸಮಾಜದ ಅಭಿಪ್ರಾಯ ರೂಪಿಸುವ, ಆಳುವ ಸರ್ಕಾರದ ಅಳಿವು ಉಳಿವಿನ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನೂ ಹೊಂದಿವೆ.

ಸಾಮಾಜಿಕ ಮಾಧ್ಯಮಗಳೆಂದರೆ ಏನು ಎಂಬುದನ್ನು ವ್ಯಾಖ್ಯಾನಿಸುವುದು ಸುಲಭವಲ್ಲ. ಇವು ಜನರು ಭಾಗಿಗಳಾಗಿ ಚರ್ಚಿಸುವ ಮತ್ತು ಮಾಹಿತಿ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಅಂತರ್ಜಾಲ ಜಾಲತಾಣಗಳಾಗಿವೆ ಎಂಬುದಾಗಿ ಸುಲಭದಲ್ಲಿ ಹೇಳಬಹುದು. ಆದರೆ ಒಂದೊಂದು ಸಾಮಾಜಿಕ ಮಾಧ್ಯಮ ಜಾಲತಾಣವೂ ಒಂದೊಂದು ರೀತಿಯ ವಿಭಿನ್ನ ಸೇವೆಗಳನ್ನು ನೀಡುವುದರಿಂದಾಗಿ ಅವುಗಳೆಲ್ಲವನ್ನೂ ಒಂದೇ ಕಡೆ ಇಟ್ಟು ವ್ಯಾಖ್ಯಾನಿಸುವುದು ಕಷ್ಟಕರ. ಉದಾಹರಣೆಗೆ ನೋಡಿ: ಫೇಸ್‌ಬುಕ್, ಬ್ಲಾಗರ್, ವಿಕಿಪೀಡಿಯಾ ಇವೆಲ್ಲವೂ ಸಾಮಾಜಿಕ ಮಾಧ್ಯಮ ಜಾಲತಾಣಗಳೇ ಹೌದು. ಆದರೆ ಫೇಸ್‌ಬುಕ್‌ನಲ್ಲಿ ಒಬ್ಬ ವ್ಯಕ್ತಿ ತನ್ನದೇ ಪ್ರೊಫೈಲ್ ರಚಿಸಿ ಸ್ನೇಹಿತರನ್ನು ಸೇರಿಸಿಕೊಳ್ಳಬಹುದು, ಹೊಸ ಗೆಳೆಯರನ್ನು ಹುಡುಕಬಹುದು ಅವರೊಡನೆ ವಿಷಯಗಳನ್ನು ಹಂಚಿಕೊಳ್ಳಬಹುದು, ವೀಡಿಯೋಗಳನ್ನು ಅಪ್‌ಲೋಡ್ ಮಾಡಬಹುದು. ಬ್ಲಾಗರ್‌ನಲ್ಲಿ ಕಥೆ, ಕವಿತೆ, ಲೇಖನಗಳನ್ನು ಬರೆದು ಪ್ರಕಟಿಸುವುದು, ಫೋಟೊ, ವೀಡಿಯೋಗಳನ್ನು ಪ್ರಕಟಿಸುವುದು ಮತ್ತು ಚರ್ಚೆ ಮಾಡುವುದು ಸಾಧ್ಯವಿದೆ. ಅಂತರ್ಜಾಲದ ಆಗಮನದೊಡನೆ ಮಾಹಿತಿ ಮಹಾಪೂರವೇ ಹರಿಯತೊಡಗಿದೆ. ಕೇವಲ ಒಂದು ದಿಕ್ಕಿನ ಮಾಹಿತಿ ಹರಿಯುವಿಕೆ ಸಾಕಾಗುತ್ತಿಲ್ಲ ಎನ್ನುವ ಹಾಗೆ ಸಂಭಾಷಣೆ, ಚರ್ಚೆಗಳೂ ಸಹಿತ ಪ್ರಾರಂಭವಾಗಿವೆ. ಅದಷ್ಟೇ ಅಲ್ಲ, ಪ್ರತಿಯೊಬ್ಬರಿಗೂ ತಮ್ಮದೇ ಆದ ಆನ್‌ಲೈನ್ ಐಡೆಂಟಿಟಿ ಮತ್ತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿಕೊಳ್ಳುವ ಅವಕಾಶಗಳು ದೊರೆಯತೊಡಗಿವೆ. ಆದರೆ ವಿಕಿಪೀಡಿಯಾದಲ್ಲಿ ಸ್ನೇಹ–ಸಂಪರ್ಕ ಎಲ್ಲ ಗೌಣ. ಇಲ್ಲಿ ಕೇವಲ ಜಾಗತೀಕವಾಗಿ ಓದುಗರಿಗೆ ಅಗತ್ಯವಾದ ಮಾಹಿತಿಯನ್ನು ಮಾತ್ರ ಹಾಕಬಹುದು ಮತ್ತು ಬೇರೆಯವರು ಹಾಕಿದ ಮಾಹಿತಿಯನ್ನು ಬೆಳೆಸಬಹುದು.

ಸಾಮಾಜಿಕ ಸಂಪರ್ಕ ತಾಣಗಳು ಈಗ ಯುವ ಜನತೆಯಲ್ಲಿ, ಉದ್ಯೋಗಿಗಳಲ್ಲಿ ಮತ್ತು ಉದ್ದಿಮೆಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಮತ್ತು ಹೆಚ್ಚು ಬಳಸಲ್ಪಡುತ್ತಿರುವ ತಾಣಗಳಾಗಿವೆ. ಇವುಗಳಲ್ಲಿ ನಮ್ಮ ಪ್ರೊಫೈಲ್ ರಚಿಸಿಕೊಳ್ಳಬಹುದು, ಸ್ನೇಹಿತರನ್ನು ಹೊಂದಬಹುದು, ಹೊಸ ಗುಂಪುಗಳನ್ನು ರಚಿಸಬಹುದು ಮತ್ತು ಸೇರಬಹುದು. ಇಷ್ಟೇ ಅಲ್ಲದೇ ಸುದ್ದಿಗಳನ್ನು, ಮನರಂಜನೆಯ ಮಾಹಿತಿಗಳನ್ನು ಹಂಚಿಕೊಳ್ಳಬಹುದು ಮತ್ತು ಅವುಗಳಿಗೆ ಪ್ರತಿಕ್ರಿಯೆ ನೀಡಬಹುದು. ಇದಕ್ಕೆ ಉದಾಹರಣೆ ಫೇಸ್‌ಬುಕ್, ಆರ್ಕುಟ್, ಗೂಗಲ್ ಪ್ಲಸ್, ಮುಂತಾದವುಗಳು. ಇದಷ್ಟೇ ಅಲ್ಲದೇ ಪ್ರತಿಯೊಬ್ಬರೂ ತಮ್ಮ ದೇಶ, ಭಾಷೆ, ಊರು, ಆಸಕ್ತಿ ಮುಂತಾದ ಸಂಗತಿಗಳ ಕುರಿತು ತಮ್ಮದೇ ಆದ ಸಾಮಾಜಿಕ ಸಂಪರ್ಕ ತಾಣಗಳನ್ನು, ಗುಂಪುಗಳನ್ನು ರಚಿಸಿಕೊಳ್ಳಬಹುದು.

ಸಾಮಾಜಿಕ ಮಾಧ್ಯಮಗಳಲ್ಲಿ ಬ್ಲಾಗಿಂಗ್‌ಗೆ ಮಹತ್ವದ ಸ್ಥಾನ. ಅಂತರ್ಜಾಲದಲ್ಲಿ ವಿಷಯಗಳನ್ನು ಪ್ರಕಟಪಡಿಸುವುದನ್ನು 'ವೆಬ್ ಲಾಗಿಂಗ್' ಅಥವಾ ಬ್ಲಾಗಿಂಗ್ ಎಂದು ಕರೆಯುತ್ತಾರೆ. ಯಾರು ಬೇಕಾದರೂ ಉಚಿತವಾಗಿ ತಮ್ಮದೇ ಆದ ಬ್ಲಾಗ್ (ಅಂತರ್ಜಾಲ

ಪತ್ರಿಕೆ, ದಿನಚರಿ ಎಂತಲೂ ಕರೆಯಬಹುದು.) ರಚಿಸಿಕೊಂಡು ತಮ್ಮದೇ ಆದ ವಿಚಾರಗಳನ್ನು, ಸೃಜನಶೀಲ ಬರಹಗಳನ್ನು, ಫ಼ೋಟೋ, ವೀಡಿಯೋಗಳನ್ನು ಪ್ರಕಟಿಸಬಹುದು. ಬ್ಲಾಗ್ ಪೋಸ್ಟ್‌ಗಳು ಎಂದು ಕರೆಯಲ್ಪಡುವ ಈ ಪ್ರಕಟಣೆಗಳನ್ನು ಆಸಕ್ತರು ಓದಬಹುದು, ಪ್ರತಿಕ್ರಿಯೆ ನೀಡಬಹುದು ಮತ್ತು ಸಾಮಾಜಿಕ ತಾಣಗಳಲ್ಲಿ ಹಂಚಿಕೊಳ್ಳಬಹುದು. ಈ ಬ್ಲಾಗಿಂಗ್ ಸೇವೆ ನೀಡುತ್ತಿರುವ ಪ್ರಮುಖ ತಾಣಗಳೆಂದರೆ ವರ್ಡ್‌ಪ್ರೆಸ್, ಬ್ಲಾಗರ್, ಕನ್ನಡದ ಸಂಪದ ಇತ್ಯಾದಿಗಳು.

**ಕಠಿಣ ಪದಗಳು**

೧. ಸೈದ್ಧಾಂತಿಕ

೨. ತಾಂತ್ರಿಕ

೩. ಸಂವಾದಾತ್ಮಕ

೪. ಸಹ ಸಂವಾದಿ

೫. ಸಂಜ್ಞಾ ಪದ್ಧತಿ

**ಅಭ್ಯಾಸ ೪**

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಸಂವಹನ ಪದದ ಮೂಲವನ್ನು ತಿಳಿಸಿ.

೨. ಸಂವಹನ ಎಂದರೇನು?

೩. ಸಾಮಾಜಿಕ ಸಂವಹನಕ್ಕೆ ನೆರವಾಗುವ ಸಾಮಾಜಿಕ ಮಾಧ್ಯಮಗಳನ್ನು ತಿಳಿಸಿ.

೪. ಸಾಮಾಜಿಕ ಮಾಧ್ಯಮ ದಿನವನ್ನು ಎಂದು ಆಚರಿಸುತ್ತಾರೆ?

೫. ಕೊರೋನಾ ಸಾಂಕ್ರಾಮಿಕ ಸಮಯದಲ್ಲಿ ಸಾಮಾಜಿಕ ಜಾಲತಾಣದ ಕೊಡುಗೆಯೇನು?

೬. ಸಾಮಾಜಿಕ ಮಾಧ್ಯಮ ಎಂದರೇನು?

೭. ಸಾಮಾಜಿಕ ಮಾಧ್ಯಮ ಬಳಕೆಯ ಕುರಿತು ತಿಳಿಸಿ.

## ೧೨.೬. ಬ್ಲಾಗ್ ಮತ್ತು ಅಂಕಣ ಬರಹ

**ಬ್ಲಾಗ್‌ಗಳ ಸ್ವರೂಪ, ಬ್ಲಾಗ್ ಬರಹಗಳು**

ಇತ್ತೀಚೆಗಿನ ದಿನಗಳಲ್ಲಿ ತುಂಬ ಎಲ್ಲರ ಬಾಯಲ್ಲೂ ಕೇಳಿಬರುತ್ತಿರುವ ಪದ 'ಬ್ಲಾಗ್'. ಅದರ ಹಲವು ಪ್ರತ್ಯಯಗಳೇ ಬ್ಲಾಗಿಂಗ್, ಬ್ಲಾಗರ್, ಇತ್ಯಾದಿ. ಈ ಬ್ಲಾಗ್ ಎಂದರೆ ಏನು? ಪವನಜರ ಮಾತಿನಲ್ಲಿ ಹೇಳುವುದಾದರೆ 'ಬ್ಲಾಗ್ ಎಂದರೆ ಒಂದು ರೀತಿಯಲ್ಲಿ ಸಾರ್ವಜನಿಕ ಸ್ವಗತ ಎನ್ನಬಹುದು. ಎಲ್ಲರಿಗೂ ಓದಲು ಅನುಕೂಲವಾಗುವಂತೆ ಅಂತರ್ಜಾಲದಲ್ಲಿ (ಇಂಟರ್‌ನೆಟ್‌ನಲ್ಲಿ) ಇಟ್ಟಂತಹ ತೆರೆದ ದಿನಚರಿ ಅಥವಾ ಡೈರಿ ಎಂದೂ ಕರೆಯಬಹುದು. ಬ್ಲಾಗ್‌ನ ಕ್ರಿಯಾರೂಪವೇ ಬ್ಲಾಗಿಂಗ್ ಅಂದರೆ ಬ್ಲಾಗ್ ನಡೆಸುವ ಕ್ರಿಯೆ. ಬ್ಲಾಗರ್ ಎಂದರೆ ಬ್ಲಾಗ್ ಬರೆಯುವ ವ್ಯಕ್ತಿ'.

ಬ್ಲಾಗ್ ಎನ್ನುವುದು ವೆಬ್ಲಾಗ್ (weblog) ಎನ್ನುವ ಪದದಿಂದ ವ್ಯುತ್ಪತ್ತಿಯಾಗಿದೆ. ಇದನ್ನು ಮೊತ್ತಮೊದಲು ಜಾನ್ ಬಾರ್ಗರ್ ಎಂದವರು ೧೯೯೭ರಲ್ಲಿ ಬಳಸಿದರು.

ಪೀಟರ್ ಮರ್ಹೋಲ್ಜ್ ಅವರು ೧೯೯೯ರಲ್ಲಿ ಇದನ್ನು ವಿ ಬ್ಲಾಗ್ (we blog) ಎಂಬುದಾಗಿ ವಿಭಜಿಸಿದರು. ಎಂದರೆ ನಾವು ಬ್ಲಾಗ್ ಮಾಡುತ್ತಿದ್ದೇವೆ ಎಂಬ ಅರ್ಥದಲ್ಲಿ. ತದನಂತರ ಬ್ಲಾಗ್ ಎನ್ನುವುದು ನಾಮಪದ ಮತ್ತು ಕ್ರಿಯಾಪದವಾಗಿ ಬಳಕೆಯಾಗತೊಡಗಿತು. ೨೦೦೧ರ ನಂತರದಲ್ಲಿ ಬ್ಲಾಗ್ ಜನಪ್ರಿಯವಾಗ ತೊಡಗಿತಾದರೂ ೨೦೦೩ರಲ್ಲಿ ಹಲವು ಉಚಿತ ಬ್ಲಾಗಿಂಗ್ ತಾಣಗಳು ಅವತರಿಸಿ ಬ್ಲಾಗಿಂಗ್ ಮನೆಮಾತಾಗುವಂತಾಯಿತು. ಇವನ್ನು ಜಾಲತಾಣಗಳೆಂದು ಕರೆಯುವುದಕ್ಕಿಂತ ಆನ್‌ಲೈನ್ ದಿನಚರಿಗಳೆಂದು ಕರೆಯುವುದೇ ಸೂಕ್ತ. ನಾವು ಓದಿದ ಪುಸ್ತಕ, ಇಷ್ಟವಾದ ತಿಂಡಿ, ಇಷ್ಟವಾಗದ ಚಲನಚಿತ್ರಗಳಿಂದ ಪ್ರಾರಂಭಿಸಿ ನಮ್ಮ ಹವ್ಯಾಸಗಳು, ಬರವಣಿಗೆಗಳು, ಅಭಿಪ್ರಾಯಗಳು – ಹೀಗೆ ನಮ್ಮ ಮನಸ್ಸಿಗೆ ಬಂದ ಯಾವುದೇ ವಿಷಯವನ್ನು ಬ್ಲಾಗುಗಳ ಮೂಲಕ ಅತ್ಯಂತ ಸುಲಭವಾಗಿ ಇಡೀ ಜಗತ್ತಿನೊಡನೆ ಹಂಚಿಕೊಳ್ಳಬಹುದು.

ಹೊಸತೊಂದು ಬ್ಲಾಗನ್ನು ಸೃಷ್ಟಿಸಿಕೊಳ್ಳುವುದು ನಮಗೊಂದು ಇಮೇಲ್ ವಿಳಾಸ ಪಡೆದುಕೊಂಡಷ್ಟೇ ಸುಲಭ! ಬ್ಲಾಗರ್, ವರ್ಡ್‌ಪ್ರೆಸ್ ಮುಂತಾದ ಯಾವುದೇ ತಾಣಕ್ಕೆ ಹೋಗಿ ಅವರು ಕೇಳುವ ಒಂದಷ್ಟು ಮಾಹಿತಿ ಕೊಟ್ಟು ನೋಂದಾಯಿಸಿಕೊಂಡರೆ ಸಾಕು, ನಮ್ಮದೇ ಆದ ಬ್ಲಾಗು ಸಿದ್ಧವಾಗುತ್ತದೆ. ನಾವು ನಮ್ಮ ಬ್ಲಾಗಿಗೆ ಮಾಹಿತಿ ಸೇರಿಸುತ್ತಿದ್ದಂತೆ ಅದನ್ನು ಎಲ್ಲರೂ ನೋಡುವುದು ಸಾಧ್ಯವಾಗುತ್ತದೆ. ಅಷ್ಟೇ ಅಲ್ಲ, ಓದುಗರಿಗೆ ಇಷ್ಟವಾದ, ಇಷ್ಟವಾಗದ ವಿಷಯಗಳ ಬಗ್ಗೆ ಅವರ ಪ್ರತಿಕ್ರಿಯೆ ದಾಖಲಿಸಲೂ ಬ್ಲಾಗುಗಳು ಅನುವು ಮಾಡಿಕೊಡುತ್ತವೆ.

ಬ್ಲಾಗ್ ಬಗ್ಗೆ ಈಗ ಇನ್ನಷ್ಟು ವಿವರಗಳನ್ನು ನೋಡೋಣ. ಅಂತರ್ಜಾಲದಲ್ಲಿ ಕೋಟಿಗಟ್ಟಲೆ ತಾಣಗಳಿವೆ (ವೆಬ್‌ಸೈಟ್). ಈ ತಾಣಗಳಿಗೂ ಬ್ಲಾಗ್‌ಗಳಿಗೂ ಇರುವ ವ್ಯತ್ಯಾಸವೇನು? ನಿಜವಾಗಿ ನೋಡಿದರೆ ಬ್ಲಾಗ್ ಕೂಡ ಒಂದು ಅಂತರ್ಜಾಲ ತಾಣವೇ. ಆದರೆ ಒಂದು ವಿಧದ ತಾಣಗಳನ್ನು ಮಾತ್ರ ಬ್ಲಾಗ್ ಎಂದು ಕರೆಯಲಾಗುತ್ತದೆ, ಬ್ಲಾಗ್‌ನ ಲಕ್ಷಣಗಳು ಅವು ನಿಯಮಿತವಾಗಿ ಹೊಸ ಬರವಣಿಗೆಗಳನ್ನು ಸೇರಿಸುತ್ತಿರಬೇಕು, ಅವುಗಳನ್ನು ಸೇರಿಸಿದ ದಿನಾಂಕ ಪ್ರಕಾರ ಅಳವಡಿಸಿರಬೇಕು, ಇದರಲ್ಲಿ ಕೊನೆಯ ಬರವಣಿಗೆ ಮೊದಲು ಲಭ್ಯವಾಗುವಂತೆ ಇರುತ್ತದೆ. ಬ್ಲಾಗ್‌ನಲ್ಲಿ ಸೇರಿಸಲ್ಪಡುವ ಲೇಖನಕ್ಕೆ ಪೋಸ್ಟ್ ಅಥವಾ ಪೋಸ್ಟಿಂಗ್ ಎನ್ನುತ್ತಾರೆ, ಈ ಪೋಸ್ಟಿಂಗ್‌ಗೆ ಒಂದು ಶೀರ್ಷಿಕೆ, ಸೇರಿಸಿದ ದಿನಾಂಕ, ಮುಖ್ಯ ಬರಹ ಅಥವಾ ಲೇಖನ, ವಿಷಯ ಇತ್ಯಾದಿ ಲಕ್ಷಣಗಳಿರುತ್ತವೆ. ಈ ಪೋಸ್ಟಿಂಗ್‌ನ ಕೆಳಗೆ ಓದುಗರು ತಮ್ಮ ಟೀಕೆ ಟಿಪ್ಪಣಿಗಳನ್ನು ಸೇರಿಸುವ ಸೌಲಭ್ಯವಿರುತ್ತದೆ. ಇಷ್ಟಲ್ಲದೆ ಈ ಬ್ಲಾಗ್‌ಗಳಿಗೆ ಆರ್.ಎಸ್.ಎಸ್. ಸೌಲಭ್ಯವೂ ಇದೆ. ಆರ್.ಎಸ್.ಎಸ್. ಎಂದರೆ ರಿಯಲಿ ಸಿಂಪಲ್ ಸಿಂಡಿಕೇಶನ್ ಎನ್ನುವುದರ ಸಂಕ್ಷಿಪ್ತ ರೂಪ. ಆರ್.ಎಸ್.ಎಸ್. ರೀಡರ್ ಎಂಬ ಹೆಸರಿನ ತಂತ್ರಾಂಶವನ್ನು (ಸಾಫ್ಟ್ ವೇರ್) ಗಣಕಗಳಲ್ಲಿ (ಕಂಪ್ಯೂಟರ್) ಅಳವಡಿಸಿಕೊಂಡರೆ ಈ ಬ್ಲಾಗ್‌ಗಳನ್ನು ಗಣಕಕ್ಕೆ ಇಮೈಲ್‌ಗಳನ್ನು ಇಳಿಸಿಕೊಂಡಂತೆ ಇಳಿಸಿಕೊಂಡು ಅಂತರಜಾಲ ಸಂಪರ್ಕ ಕಡಿದ ಮೇಲೂ ಓದಬಹುದು. ಬ್ಲಾಗ್ ಸುಲಭವಾಗಿ ಹೊಸ ಪುಟವನ್ನು ಸೇರಿಸುವ ಸೌಲಭ್ಯವನ್ನು ಹೊಂದಿದೆ. ಮಾಮೂಲಿ ಅಂತರ್ಜಾಲ ತಾಣಗಳಿಗೆ ಈ ಸೌಲಭ್ಯವಿರುವುದಿಲ್ಲ, ಹೊಸ ಪೋಸ್ಟಿಂಗ್ ಸಾಮಾನ್ಯವಾಗಿ ಪುಟದ ಮೇಲೆ ತೋರುತ್ತದೆ. ಇನ್ನೊಂದು ಹೊಸ ಪೋಸ್ಟಿಂಗ್ ಬಂದಾಗ ಹಳೆಯ ಪೋಸ್ಟಿಂಗ್ ತನಗೆ ತಾನೆ ಕೆಳಗೆ ತಳ್ಳಲ್ಪಡುತ್ತದೆ. ಟೀಕೆಯ ಕೆಳಗೆ ಇತರೆ ಓದುಗರು

ಟೀಕೆಗೆ ತಂತಮ್ಮ ಟೀಕೆಗಳನ್ನು ಸೇರಿಸಬಹುದು, ಕೆಲವೊಮ್ಮೆ ಈ ಸರಪಣಿ ದೊಡ್ಡ ಚರ್ಚೆ ಅಥವಾ ವಾಗ್ವಾದವಾಗುವುದೂ ಇದೆ. ಎಲ್ಲ ಅಂತರ್ಜಾಲ ತಾಣಗಳಿಗಿರುವಂತೆ ಬಾಗ್‌ಗಳಿಗೂ ಇತರ ತಾಣಗಳು ಅಥವಾ ಬ್ಲಾಗ್‌ಗಳಿಗೆ ಕೊಂಡಿ ನೀಡುವ ಸೌಲಭ್ಯವಿದೆ. ಸರಳವಾಗಿ ಹೇಳಬೇಕೆಂದರೆ ಬ್ಲಾಗ್ ಒಬ್ಬ ವ್ಯಕ್ತಿಯ ವೈಯಕ್ತಿಕ ಅನಿಸಿಕೆಗಳನ್ನು ಜಗತ್ತಿಗೆಲ್ಲ ತಿಳಿಯುವಂತೆ ಸಾರ್ವಜನಿಕವಾಗಿ ಬರೆಯುವ ವ್ಯವಸ್ಥೆ.

ಯಾವ ಯಾವ ರೀತಿಯ ಬ್ಲಾಗ್‌ಗಳಿವೆ ಎಂಬುದನ್ನು ವೀಕ್ಷಿಸಿ ನೋಡಿದರೆ ನಮಗೆ ಅಂತರ್ಜಾಲದಲ್ಲಿ ಎಷ್ಟು ವೈವಿಧ್ಯದ ತಾಣಗಳಿವೆಯೋ ಅಷ್ಟೇ ವೈವಿಧ್ಯ ಬ್ಲಾಗ್‌ಗಳಲ್ಲೂ ಇರುವುದು ಗೋಚರವಾಗುತ್ತದೆ. ಬ್ಲಾಗ್‌ಗಿಗರಲ್ಲಿ ಬಹುಪಾಲು ಮಂದಿ ತಮ್ಮ ಹೊತ್ತು ಕಳೆಯಲು ಅಥವಾ ಏನಾದರೂ ಹೇಳಬೇಕು ಎನ್ನುವ ತುಡಿತ ತೀರಿಸಿಕೊಳ್ಳಲು ಬ್ಲಾಗಿಂಗ್ ಮಾಡುತ್ತಿದ್ದಾರೆ. ಹಾಗಿದ್ದರೂ ಇವರ ಬ್ಲಾಗ್‌ಗಳಲ್ಲಿ ಹಲವು ಉಪಯುಕ್ತ ಮಾಹಿತಿಗಳು ದೊರೆಯುವ ಸಾಧ್ಯತೆಗಳಿವೆ. ಬ್ಲಾಗ್ ಮಾಡುತ್ತಿರುವವರು ವಿಜ್ಞಾನಿ, ತಂತ್ರಜ್ಞಾನಿ, ಕಥೆಗಾರ ಅಥವಾ ಸಾಹಿತಿಯಾಗಿದ್ದರಂತೂ ಓದುಗರಿಗೆ ಅದು ಒಂದು ಬೋನಸ್ ಎನ್ನಬಹುದು. ಪರಿಣತರಾದ ತಂತ್ರಜ್ಞರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಆಗುತ್ತಿರುವ ಹೊಸ ಸಂಶೋಧನೆಗಳ ಬಗ್ಗೆ ಪೂರ್ವಭಾವಿಯಾಗಿ ಬ್ಲಾಗ್ ಬರೆಯುವ ಮೂಲಕ ಈ ವಿಷಯಗಳಲ್ಲಿ ಆಸಕ್ತಿ ಇರುವವರಿಗೆ ಮಾಹಿತಿ ಬೇಗನೆ ಸಿಗುವಂತಾಗುತ್ತದೆ. ಕೆಲವು ತಂತ್ರಜ್ಞರು ತಮ್ಮ ಕ್ಷೇತ್ರದ ಬಗ್ಗೆ ಕೆಲವು ಉಪಯುಕ್ತ ಸಲಹೆಗಳ ಕಿವಿಮಾತುಗಳನ್ನೂ ತಮ್ಮ ಬ್ಲಾಗ್‌ಗಳಲ್ಲಿ ನೀಡುತ್ತಿರುತ್ತಾರೆ. ಪವನಜ ಅವರು ಕನ್ನಡ ಮತ್ತು ಗಣಕ ಸಂಬಂಧಿ ಸಲಹೆ ಸೂಚನೆಗಳನ್ನು ಆಗಾಗ ಅವರ ಬ್ಲಾಗ್‌ನಲ್ಲಿ ನೀಡುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ಬ್ಲಾಗ್‌ಗಳಿಗೆ ತಮ್ಮದೇ ಆದ ಮಹತ್ವ ಇದೆ.

ಅಂತರ್ಜಾಲದಲ್ಲಿ, ಹೆಚ್ಚು ಮಂದಿಯ ಬ್ಲಾಗ್‌ಗಳು ಇರುವುದು ಉಚಿತ ತಾಣಗಳಲ್ಲಿ; ಅಲ್ಲಿ ಜಾಗದ ಕೊರತೆ ಇಲ್ಲ. ಲೇಖನವೊಂದಕ್ಕೆ ಇಂತಿಷ್ಟೇ ಪದಗಳಿರಬೇಕೆಂಬ ಮಿತಿಯೂ ಇಲ್ಲ. ಸಂಪಾದಕರ ಅಂಕುಶ ಕತ್ತರಿಗಳಿಲ್ಲ. ಬರೆಯಬೇಕೆನಿಸಿದ್ದನ್ನು ನೇರವಾಗಿ ಜಾಲತಾಣದಲ್ಲಿ ದಾಖಲಿಸುವುದರಿಂದ ಬರೆದ ನಂತರ ಅದು ಪ್ರಕಟವಾಗುವ ನಡುವಿನ ಸಮಯ ಉಳಿತಾಯವಾಗುತ್ತದೆ. ಇಲ್ಲಿ ಎಲ್ಲವೂ ಫಾಸ್ಟ್ ಫುಡ್‌ಗಳಂತೆ ಕ್ಷಣಕ್ಷಣದ ವ್ಯವಹಾರ. ಲೇಖನಕ್ಕೆ ಸಂಬಂಧಿಸಿದಂತೆ ಛಾಯಾಚಿತ್ರಗಳಿದ್ದರೆ ಅವುಗಳನ್ನೂ ಜಾಲತಾಣಕ್ಕೆ ಸೇರಿಸಬಹುದು; ನೇರವಾಗಿ ಘಟನೆ ನಡೆಯುತ್ತಿರುವ ಸ್ಥಳದಿಂದಲೇ ಲೇಖನವನ್ನು ಅಂತರ್ಜಾಲಕ್ಕೆ ಸೇರಿಸಬಹುದು; ಕೇವಲ ಲ್ಯಾಪ್‌ಟಾಪ್ ಮತ್ತು ಅಂತರ್ಜಾಲ ಸಂಪರ್ಕ ಇದ್ದರೆ ಸಾಕು. ಈಗೀಗ ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿರುವ ಕೆಲವು ಅತ್ಯಾಧುನಿಕ ಮೊಬೈಲ್ ಫೋನುಗಳಿಂದ ಕೂಡ ನೇರವಾಗಿ ಈ ಎಲ್ಲಾ ಕೆಲಸಗಳನ್ನು ನಡೆಸಬಹುದು. ಬ್ಲಾಗಿಂಗ್‌ಗೆ ಇರುವ ಇನ್ನೊಂದು ಅತಿ ಮುಖ್ಯವಾದ ಸವಲತ್ತೆಂದರೆ ಓದುಗರು ತಮ್ಮ ಟೀಕೆ ಟಿಪ್ಪಣಿಗಳನ್ನು ಸೇರಿಸುವ ಸೌಲಭ್ಯ. ಆದರೆ ಇದು ಪ್ರತಿಸ್ಪಂದನಾತ್ಮಕ ಅಂತರ್ಜಾಲದಲ್ಲಿ ಮಾತ್ರ ಸಾಧ್ಯ.

ಹಾಗಾದರೆ ಎಲ್ಲ ಬ್ಲಾಗ್‌ಗಳೂ ಪತ್ರಿಕೋದ್ಯಮವೇ? ಯಾವುದಾದರೊಂದು ಪ್ರಮುಖ ಘಟನೆ ಬಗ್ಗೆ ಆ ಘಟನೆ ಜರುಗಿದ ಸ್ಥಳದಿಂದ ಯಾರಾದರೂ ನೇರವಾಗಿ ವರದಿ ರೂಪದಲ್ಲಿ ಬರೆದ ಬರಹಗಳು, ಅಂತರ್ಜಾಲದಲ್ಲಿರುವ ಇತರ ಸುದ್ದಿಗಳಿಗೆ ಕೊಂಡಿ ನೀಡುವ ಬರಹಗಳು ಮುಂತಾದವುಗಳನ್ನು ಬ್ಲಾಗ್ ಪತ್ರಿಕೋದ್ಯಮ ಎನ್ನಬಹುದು.

ಬ್ಲಾಗುಗಳು ಇಂದು ಅಭೂತಪೂರ್ವ ಯಶಸ್ಸು ಗಳಿಸಿಕೊಂಡಿರುವುದು ತಮ್ಮ ಈ ಸರಳತೆಯಿಂದಾಗಿಯೇ. ಹೀಗಾಗಿ ಇಂದು ಕನ್ನಡವೂ ಸೇರಿದಂತೆ ಬಹುತೇಕ ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ ಬ್ಲಾಗ್‌ಗಳು ಜನಪ್ರಿಯವಾಗಿವೆ.

ಸುಮಾರು ೧೯೯೦ರ ದಶಕದ ಮಧ್ಯಭಾಗದಲ್ಲಿ ಕಾಣಿಸಿಕೊಳ್ಳಲು ಪ್ರಾರಂಭವಾದ ಬ್ಲಾಗ್‌ಗಳು ಹೆಚ್ಚಿನ ಜನಪ್ರಿಯತೆ ಗಳಿಸಿಕೊಂಡದ್ದು ಈ ಶತಮಾನದ ಪ್ರಾರಂಭದಲ್ಲಿ. ಇದಾದ ಒಂದೆರಡು ವರ್ಷಗಳ ಅವಧಿಯಲ್ಲೇ ಕನ್ನಡದಲ್ಲೂ ಬ್ಲಾಗ್‌ಗಳು ನಿರ್ಮಾಣವಾದವು. ಕೃಷ್ಣಾನಂದ ಕಾಮತರ ಪುತ್ರ ವಿಕಾಸ ಕಾಮತರು ೨೦೦೩ರಲ್ಲೇ ತಮ್ಮ ಜಾಲತಾಣದಲ್ಲಿ ಕನ್ನಡ ಬ್ಲಾಗನ್ನು ಪ್ರಾರಂಭಿಸಿದ್ದರು. ಅಲ್ಲಿನ ಬರಹಗಳು ಚಿತ್ರರೂಪದಲ್ಲಿರುತ್ತಿದ್ದವು. ಮುಂದೆ ಕನ್ನಡ ಯುನಿಕೋಡ್ ಸೌಲಭ್ಯ ಲಭ್ಯವಾದಾಗ ಬ್ಲಾಗ್‌ಗಳ ಮೂಲಕ ಮಾಹಿತಿ ಸಂವಹನ ನಡೆಸುವುದು ಇನ್ನಷ್ಟು ಸುಲಭವಾಯಿತು. ಆ ವೇಳೆಗಾಗಲೇ ಪ್ರಸಿದ್ಧವಾಗಿದ್ದ ಬರಹ ಹಾಗೂ ನುಡಿ ತಂತ್ರಾಂಶಗಳು ಸುಲಭವಾಗಿ ಯುನಿಕೋಡ್ ಪಠ್ಯವನ್ನು ಬೆರಳಚ್ಚಿಸಲು ಅನುವು ಮಾಡಿಕೊಟ್ಟಿದ್ದು ಕನ್ನಡದಲ್ಲಿ ಹೊಸಹೊಸ ಬ್ಲಾಗ್‌ಗಳು ತಯಾರಾಗಲು ಪರೋಕ್ಷ ಪ್ರೇರಣೆಯನ್ನು ಒದಗಿಸಿತು.

ಯು.ಬಿ. ಪವನಜ, ಹರಿಪ್ರಸಾದ್ ನಾಡಿಗ್, ಪಿ.ಎಂ. ಕೃಷ್ಣರಾಜ್, ಎಂ.ಎಸ್. ಶ್ರೀರಾಮ್, ಶೇಷಾದ್ರಿ, ಸತೀಶ್ ಕುಮಾರ್ ಮುಂತಾದ ಅನೇಕರು ಕನ್ನಡದಲ್ಲಿ ಬ್ಲಾಗಿಸಲು ಪ್ರಾರಂಭಿಸಿದರು. ಹರಿಪ್ರಸಾದ್ ನಾಡಿಗ್ ೨೦೦೪ರಲ್ಲಿ ಸಂಪದ ಎಂಬ ಸಮುದಾಯತಾಣವನ್ನು ಪ್ರಾರಂಭಿಸಿದ ಮೇಲೆ ಕನ್ನಡ ಬ್ಲಾಗುಗಳಿಗೊಂದು ಪ್ರಭಾವಶಾಲಿ ವೇದಿಕೆಯೂ ದೊರೆಯಿತು. ಕನ್ನಡಕ್ಕಾಗಿಯೇ ಇರುವ, ಈಗಾಗಲೇ ಮೂರು ಸಾವಿರಕ್ಕೂ ಹೆಚ್ಚು ಬಳಕೆದಾರರನ್ನು ಹೊಂದಿರುವ ಈ ತಾಣದಲ್ಲಿ ನೋಂದಾಯಿಸಿಕೊಂಡ ಯಾರು ಬೇಕಿದ್ದರೂ ಕನ್ನಡ ಬ್ಲಾಗ್‌ಗಳನ್ನು ಪ್ರಾರಂಭಿಸ ಬಹುದು. ಈಗಂತೂ ಲೇಖಕರು, ಪತ್ರಕರ್ತರು, ಅಂಕಣಕಾರರು, ತಂತ್ರಜ್ಞರು, ಹವ್ಯಾಸಿ ಬರಹಗಾರರು, ವಿವಿಧ ವಿಷಯಗಳ ಪರಿಣತರು – ಹೀಗೆ ಅನೇಕರು ಬ್ಲಾಗ್ ಪ್ರಪಂಚದಲ್ಲಿ ಸಕ್ರಿಯರಾಗಿ ಕನ್ನಡದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಕನ್ನಡದಲ್ಲಿ ಬರೆದ ಸಾವಿರಾರು ಬ್ಲಾಗುಗಳು ಒಟ್ಟಾರೆಯಾಗಿ ಜಾಲಲೋಕದಲ್ಲಿ ಕನ್ನಡದ ಬೆಳವಣಿಗೆಗೆ ತಮ್ಮ ಕೊಡುಗೆ ನೀಡುತ್ತಿವೆ. ಈ ವ್ಯವಸ್ಥೆಯನ್ನು ಆಧಾರವಾಗಿಟ್ಟುಕೊಂಡು ಕೆಲಸ ಮಾಡುತ್ತಿರುವ ಕನ್ನಡ ತಾಣಗಳಿಗೆ 'ಬರಹ ಕನ್ನಡಲೋಕ' ಒಂದು ಉದಾಹರಣೆ. ಆ ತಾಣದಲ್ಲಿ ನೋಂದಾಯಿಸಿಕೊಂಡಿರುವ ಕನ್ನಡದ ಬ್ಲಾಗ್‌ಗಳಲ್ಲಿ ಹೊಸದಾಗಿ ಏನೆಲ್ಲ ಲೇಖನಗಳು ಪ್ರಕಟವಾಗುತ್ತಿವೆ ಎನ್ನುವುದನ್ನು ನಾವು ಅಲ್ಲಿ ನೋಡಬಹುದು.

ಬ್ಲಾಗ್‌ಗಳಲ್ಲಿ ಪ್ರಕಟವಾಗುವ ಮಾಹಿತಿಯ ಕೊಂಡಿಯನ್ನು ಫೇಸ್‌ಬುಕ್ ಮೂಲಕ ಹಂಚಿಕೊಳ್ಳುವ ಅಭ್ಯಾಸವೂ ವ್ಯಾಪಕವಾಗಿದೆ. ವೈಯಕ್ತಿಕ ಪ್ರೊಫೈಲುಗಳಲ್ಲಷ್ಟೇ ಅಲ್ಲದೆ ಫೇಸ್‌ಬುಕ್‌ನಲ್ಲಿ ನಮ್ಮ ಬ್ಲಾಗ್‌ಗೆಂದೇ ವಿಶೇಷ ಪುಟಗಳನ್ನು ರೂಪಿಸಿಕೊಳ್ಳುವ ಸಾಧ್ಯತೆಯೂ ಇದೆ. ನಮ್ಮ ಬ್ಲಾಗಿನಲ್ಲಿ ಪ್ರಕಟವಾದ ಮಾಹಿತಿಯ ಕೊಂಡಿ ನೇರವಾಗಿ ಫೇಸ್‌ಬುಕ್ ಪುಟದಲ್ಲೂ ಕಾಣಿಸಿಕೊಳ್ಳುವಂತೆ ಮಾಡುವ ಸೇವೆಗಳೂ ಲಭ್ಯವಿವೆ.

## ಮೈಕ್ರೋಬ್ಲಾಗಿಂಗ್

ಇತ್ತೀಚೆಗೆ ಜಗತ್ಪ್ರಸಿದ್ಧವಾಗಿರುವ ಸೇವೆಗಳಲ್ಲಿ ಮೈಕ್ರೋಬ್ಲಾಗಿಂಗ್ ಮುಖ್ಯವಾದುದು. ಬ್ಲಾಗಿಂಗ್ ತಾಣಗಳಲ್ಲಿ ಎಷ್ಟು ಬೇಕಾದರೂ ಬರೆಯಬಹುದು. ಆದರೆ ಈ ಮೈಕ್ರೋಬ್ಲಾಗಿಂಗ್

ನಲ್ಲಿ ಕೆಲವೇ ಅಕ್ಷರಗಳ ಮಿತಿಯಲ್ಲಿ (ಉದಾಹರಣೆಗೆ, ಟ್ವಿಟರ್‌ನಲ್ಲಿ ಕೇವಲ ೧೪೦ ಅಕ್ಷರಗಳು) ಬ್ಲಾಗ್ ಮಾಡಬೇಕಾಗುತ್ತದೆ. ಇದನ್ನು ಹೊಸ ಮಾಹಿತಿ ಹಾಗೂ ತಕ್ಷಣದ ಸುದ್ದಿಯನ್ನಾಗಿ ಜಗತ್ತಿಗೆ ತಿಳಿಸಲು ಬಳಸುತ್ತಾರೆ. ಫೇಸ್‌ಬುಕ್, ಟಂಬ್ಲರ್ ಮತ್ತು ಗೂಗಲ್ ಪ್ಲಸ್‌ನಲ್ಲಿಯೂ ಮೈಕ್ರೋಬ್ಲಾಗಿಂಗ್ ಮಾಡಬಹುದು. ಇಂದು ಟ್ವಿಟರ್ ಅನ್ನು ಸಿನೆಮಾ, ಕ್ರೀಡಾ ತಾರೆಗಳು, ಸುದ್ದಿ ಮಾಧ್ಯಮಗಳು, ವೃತ್ತಿಪರ ವ್ಯಕ್ತಿಗಳು ಮತ್ತು ವಿದ್ಯಾರ್ಥಿಗಳು ಬಳಸುತ್ತಿದ್ದಾರೆ ಅಷ್ಟೇ ಅಲ್ಲದೇ ಉದ್ದಿಮೆಗಳು, ಸಂಘ-ಸಂಸ್ಥೆಗಳೂ ನಿರಂತರವಾಗಿ ಬಳಸುತ್ತಿವೆ.

**ಅಂಕಣ ಬರಹ**

ಇದೊಂದು ವಿಶಿಷ್ಟ ಬಗೆಯ ಪತ್ರಿಕಾ ಸಾಹಿತ್ಯ. ಪತ್ರಿಕೆಗಳಲ್ಲಿ ನಿಯತವಾಗಿ ಬರೆಯುವ ನಿರ್ದಿಷ್ಟ ಲೇಖನಕ್ಕೆ ಅಂಕಣ ಬರೆಹವೆಂದು ಹೆಸರು. ಕನ್ನಡದಲ್ಲಿ ಅಂಕಣ ಹಾಗೂ ಅಂಕಣ ಸಾಹಿತ್ಯದ ಪರಿಕಲ್ಪನೆ ಇಂಗ್ಲಿಷ್ ಪತ್ರಿಕೋದ್ಯಮದಿಂದ ಬಂದಿದೆ. ಅಂಕಣವು ದಿನಪತ್ರಿಕೆ, ನಿಯತಕಾಲಿಕ ಅಥವಾ ಇತರ ಪ್ರಕಟಣೆಗಳ ಒಂದು ಪುನರಾವರ್ತಕ ವಿಭಾಗ ಅಥವಾ ಲೇಖನವಾಗಿರುತ್ತದೆ. ಅಂಕಣಗಳು ಅಂಕಣಕಾರರಿಂದ ಬರೆಯಲ್ಪಡುತ್ತವೆ. ಅದು ಒಂದು ಪ್ರಕಟಣೆಯಲ್ಲಿ ಕ್ರಮಬದ್ಧ ಲೇಖನವಾಗಿರುತ್ತದೆ. ಇಂಗ್ಲಿಷಿನ ಕಾಲಂ ಎಂಬ ಪದ ಹಾಗೂ ಪರಿಕಲ್ಪನೆಗೆ ಸಂವಾದಿಯಾಗಿ ಕನ್ನಡದಲ್ಲಿ ಅಂಕಣ ಎಂಬ ಪದ ಬಳಕೆಯಾಗುತ್ತಿದೆ. ಯಾವುದೇ ವಸ್ತು ವಿಷಯವನ್ನು ಕುರಿತು ಒಂದು ನಿರ್ದಿಷ್ಟ ಪತ್ರಿಕೆ ಅಥವಾ ನಿಯತಕಾಲಿಕೆಗೆ ತಮ್ಮ ವೈಯಕ್ತಿಕ ಚಿಂತನೆಯನ್ನು ಸೇರಿಸಿ ನಿಯತವಾಗಿ ಬರೆಯುವವನೇ ಅಂಕಣಕಾರ. ಅಂಕಣ ಬರೆಹದಲ್ಲಿ ಅಂಕಣಕಾರ ಸಮಕಾಲೀನ ವಸ್ತು ವಿಷಯಗಳಿಗೆ ಸ್ವಂತಿಕೆಯ ಲೇಪ ಹಾಗೂ ಛಾಪನ್ನು ನೀಡಬೇಕಾಗುತ್ತದೆ. ಇದು ಅಂಕಣ ಬರಹದ ಒಂದು ಮುಖ್ಯ ಲಕ್ಷಣವಾಗಿದೆ. ಕೆಲವೊಮ್ಮೆ ಅಂಕಣ ಬರಹಗಳು ಜನಸಾಮಾನ್ಯರ ಅಭಿಪ್ರಾಯಗಳ ಧ್ವನಿಯಾಗಿರುತ್ತಿದ್ದವು. ಆಧುನಿಕ ಕಾಲದಲ್ಲಿ ಬೆಳೆದ ಅಂಕಣ ಬರಹ ಪತ್ರಿಕೋದ್ಯಮದಲ್ಲಿ ಒಂದು ಚಿರಸ್ಥಾನವನ್ನು ಪಡೆಯಿತಲ್ಲದೆ ಅದಕ್ಕೆ ಒಂದು ಪರಂಪರೆಯೂ ಸೃಷ್ಟಿಯಾಯಿತು. ಅಂಕಣ ಬರೆಹದ ವೈಶಿಷ್ಟ್ಯವೆಂದರೆ ಸಾಮಾನ್ಯ ಓದುಗರಿಂದ ಹಿಡಿದು ವಿದ್ವಾಂಸರ ತನಕ ಎಲ್ಲರನ್ನೂ ಆಕರ್ಷಿಸುವ ಗುಣವನ್ನು ಪಡೆದು ಕೊಂಡಿರುವುದೇ ಆಗಿದೆ. ಓದುಗರಲ್ಲಿ ಅಭಿರುಚಿ ಮೂಡಿಸುವ ಕಾರ್ಯವನ್ನು ಅಂಕಣ ಬರಹ ಮಾಡುತ್ತದೆ. ಅಂಕಣ ಬರೆಹಗಳು ಆತ್ಮಕೇಂದ್ರಿತವೆ ಅಥವಾ ಸಮಾಜ, ಸಾಹಿತ್ಯ, ಸಂಸ್ಕೃತಿ ಕೇಂದ್ರಿತವೆ ಎಂಬ ಪ್ರಶ್ನೆಯೂ ಇದೆ. ಸಾಮಾನ್ಯವಾಗಿ ಅಂಕಣ ಬರಹದಲ್ಲಿ ಲೇಖಕ ನಾನು ಎಂಬ ಪ್ರತ್ಯಯವನ್ನು ಬಳಸಿದರೂ ಅದು ಆತ್ಮಕೇಂದ್ರಿತ ಅಥವಾ ಅಹಮಿಕೆಯನ್ನು ಸೂಚಿಸುವ ಪದವಾಗಿ ಉಳಿಯುವುದಿಲ್ಲ; ಬದಲಿಗೆ ಬರಹಕ್ಕೆ ಒಂದು ಸಂವಾದದ ಸ್ವರೂಪವನ್ನು ನೀಡುವುದಾಗಿರುತ್ತದೆ.

ಅಂಕಣ ಬರಹಕ್ಕೆ ಸಮಕಾಲೀನ ಸಮಾಜದ ಯಾವ ಮುಖವಾದರೂ ವಸ್ತುವಾಗ ಬಹುದೆಂದು ಪ್ರಸಿದ್ಧ ಅಂಕಣಕಾರರಾದ ಹಾ.ಮಾ. ನಾಯಕರು ಅಭಿಪ್ರಾಯ ಪಟ್ಟಿದ್ದಾರೆ. ಹೆಚ್ಚಿನ ಅಂಕಣ ಬರಹಗಳು ಸಮಕಾಲೀನ ರಾಜಕೀಯ ವಿದ್ಯಾಮಾನಗಳನ್ನು ಕುರಿತಿರುತ್ತವೆ. ಸಾಹಿತ್ಯಕ ಪ್ರಸ್ತಾಪವುಳ್ಳ ಅಂಕಣಗಳು ಕನ್ನಡದಲ್ಲಿ ವಿರಳ. ವಿಜ್ಞಾನ, ಸಂಗೀತ, ಕಲೆ, ಶಿಕ್ಷಣ, ವೈದ್ಯಕೀಯ, ಕ್ರೀಡೆ ಮುಂತಾದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಂಕಣಗಳು

ದುರ್ಲಭವೇನಲ್ಲ. ಈಗೀಗ ಲಘು ಹರಟೆಗಳೂ ಅಂಕಣ ಬರಹದಲ್ಲಿ ಸ್ಥಾನಪಡೆದಿವೆ. ಸಾಹಿತ್ಯ ವಿಚಾರ ಪ್ರಧಾನವಾದ ಅಂಕಣಗಳಲ್ಲಿ ಸಾಮಾನ್ಯವಾಗಿ ವ್ಯಕ್ತಿ, ಕೃತಿ, ಸಂಸ್ಕೃತಿ, ಶಿಕ್ಷಣ ಹಾಗೂ ಕಲೆಗಳನ್ನು ಕುರಿತ ಚಿಂತನೆ ಇರುತ್ತದೆ. ಅಂಕಣ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಬಗೆಯ ಗದ್ಯವಿರುತ್ತದೆ. ಕನ್ನಡದ ಸಾಹಿತಿ ಪತ್ರಿಕೋದ್ಯಮಿಗಳಾದ ಡಿ.ವಿ.ಜಿ. ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಸಂಪಾದಕೀಯ ಬರಹಗಳು ಕನ್ನಡ ಅಂಕಣ ಸಾಹಿತ್ಯದ ಉಗಮಕ್ಕೆ ತೋರುದೀವಿಗೆಗಳಾದವು. ಕನ್ನಡ ಪತ್ರಿಕೋದ್ಯಮ ಬೆಳೆಯುತ್ತ ಬಂದಂತೆ ಅದರ ವ್ಯಾಪ್ತಿಯೂ ವಿಸ್ತಾರವಾಗತೊಡಗಿತು. ಸಂಪಾದಕೀಯ ಬರಹಗಳ ಜೊತೆಗೆ ಅಂಕಣಗಳು ಪ್ರತ್ಯೇಕವಾಗಿ ಕಾಣಿಸಿಕೊಳ್ಳಲು ಆರಂಭವಾದವು. 'ಸ್ವದೇಶಾಭಿಮಾನಿ', 'ಅಂತರಂಗ', 'ದೇಶಬಂಧು', 'ಛಾಯಾ', 'ಪ್ರಜಾಮತ', 'ಪ್ರಜಾವಾಣಿ', 'ಕನ್ನಡಪ್ರಭ', 'ಕರ್ಮವೀರ', 'ವಿಶ್ವಕರ್ನಾಟಕ', 'ಪ್ರಪಂಚ' – ಮುಂತಾದ ಪತ್ರಿಕೆಗಳು ಅಂಕಣ ಬರಹಗಳಿಗೆ ವೇದಿಕೆಯನ್ನು ನೀಡಿದವಲ್ಲದೆ ಅಂಕಣ ಬರಹಕ್ಕೆ ಒಂದು ಆಯಾಮವನ್ನೂ ಕೊಟ್ಟವು. ಸಿದ್ಧವನಹಳ್ಳಿ ಕೃಷ್ಣಶರ್ಮ, ನಿರಂಜನ, ಎಚ್ಚೆಸ್ಕೆ, ಹಾ.ಮಾ. ನಾಯಕ, ಕು.ಶಿ. ಹರಿದಾಸಭಟ್ಟ, ಪಾ.ವೆಂ. ಆಚಾರ್ಯ, ತಿ.ತಾ. ಶರ್ಮ, ಎನ್ಕೆ, ಎಂ.ವಿ. ಕಾಮತ್, ಕಲ್ಲೆ ಶಿವೋತ್ತಮರಾವ್, ಕೀರ್ತಿನಾಥ ಕುರ್ತಕೋಟಿ, ಟಿ.ಎಸ್. ರಾಮಚಂದ್ರರಾವ್, ಬಿ.ವಿ. ವೈಕುಂಠರಾಜು, ಪಿ. ಲಂಕೇಶ್, ವೈಎನ್ಕೆ, ಜಿ. ವೆಂಕಟಸುಬ್ಬಯ್ಯ, ಸಿ.ವಿ. ರಾಜಗೋಪಾಲ ಬಿ.ಎ. ವಿವೇಕ ರೈ, ಎಸ್.ಎನ್. ಹೆಗಡೆ, ಸೋಮಶೇಖರ ಇಮ್ರಾಪುರ, ಲಿಂಗದೇವರು ಹಳೆಮನೆ ಮೊದಲಾದವರ ಅಂಕಣಗಳು ವಿಶಿಷ್ಟವಾದವು. ಪ್ರಸ್ತುತ ಕನ್ನಡ ಪತ್ರಿಕೋದ್ಯಮದಲ್ಲಿ ಈಗ ಅಂಕಣ ಬರಹ ಇಲ್ಲದ ಒಂದು ಪತ್ರಿಕೆಯೂ ಇಲ್ಲ ಎನ್ನಬಹುದು. ಕನ್ನಡದಲ್ಲಿ ನಿಯತಕಾಲಿಕೆಗಳಿಗೆ ಹೆಚ್ಚುಕಾಲ ಸಾಹಿತ್ಯಕ ಅಂಕಣ ಬರೆದವರಲ್ಲಿ ಹಾ.ಮಾ. ನಾಯಕ ಮತ್ತು ಎಚ್ಚೆಸ್ಕೆ ಅವರನ್ನು ಹೆಸರಿಸಬಹುದು. ಎಚ್ಚೆಸ್ಕೆ ಅವರ ಅಂಕಣ ಸಾಹಿತ್ಯಕ್ಕಷ್ಟೇ ಸೀಮಿತವಲ್ಲ; ಆರ್ಥಿಕ ವಿಚಾರ, ವ್ಯಕ್ತಿವಿಷಯ, ರಾಜಕೀಯ ಮುಂತಾದವೂ ಅಲ್ಲಿ ಪ್ರಸ್ತಾಪಗೊಳ್ಳುತ್ತವೆ. ಎಚ್ಚೆಸ್ಕೆ ಅವರು 'ದೇಶಬಂಧು', 'ವಿಶ್ವಕರ್ನಾಟಕ', 'ಛಾಯಾ', 'ಕನ್ನಡನುಡಿ', 'ಪ್ರಜಾವಾಣಿ,' 'ಸುಧಾ' ಪತ್ರಿಕೆಗಳಲ್ಲಿ ಐದಾರು ದಶಕಗಳ ಕಾಲ ಅಂಕಣ ವ್ಯವಸಾಯ ಮಾಡಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಇತ್ತೀಚೆಗೆ ಅಪರೂಪದ ಹೊಸ ಅಂಕಣ ಬರಹಗಳು ಅಂತರಜಾಲ ತಾಣದಲ್ಲಿ ಲಭ್ಯವಿವೆ. ಶ್ರೀವತ್ಸ ಜೋಷಿಯವರ 'ವಿಚಿತ್ರಾನ್ನ'ವು ಇಂಟರ್‌ನೆಟ್‌ನಲ್ಲಿ ಮೂಡಿಬಂದ ಮೊದಲ ಕನ್ನಡ ಅಂಕಣ ಬರಹಗಳ ಪುಸ್ತಕವಾಗಿದೆ. ಇಂದಿನ ಇಂಟರ್‌ನೆಟ್ ಲೋಕದಲ್ಲಿ ಕನ್ನಡತನವೇನು ಕಡಿಮೆಯಿಲ್ಲ ಎಂಬುದನ್ನು ಕೆಲವರು ಇ–ಅಂಕಣಕಾರರುಗಳಾದ ಜಾಲತರಂಗದ ಡಾ. ಎಂ.ಎಸ್. ನಟರಾಜ್, ತುಳಸಿವನದ ಕೆ. ತ್ರಿವೇಣಿ ಶ್ರೀನಿವಾಸರಾವ್ ಮುಂತಾದವರು ತಮ್ಮ ವಿಚಾರಗಳ ಅನುಭವ ಬುತ್ತಿಯ ಸವಿಯನ್ನು ನಿಯಮಿತವಾಗಿ ಓದುಗರಿಗೆ ಉಣಬಡಿಸುತ್ತಿದ್ದಾರೆ. ಇತ್ತ ವರದಿಯೂ ಅಲ್ಲದ ಅತ್ತ ಪೂರ್ಣವಾಗಿ ಸಾಹಿತ್ಯವೂ ಅಲ್ಲದ ಆದರೆ ಸಮಕಾಲೀನ ಆಗುಹೋಗುಗಳನ್ನು ಹಿಡಿದಿಡುವ ಸೃಜನಶೀಲತೆಯ ಸೆಲೆಯುಳ್ಳ ಬರಹಗಳು ಕನ್ನಡದಲ್ಲಿ ಅಂಕಣ ಸಾಹಿತ್ಯವೆಂದು ಗುರುತಿಸಿಕೊಂಡಿವೆ.

**ಕಠಿಣ ಪದಗಳು**

೧. ಸ್ವಗತ

೨. ನಿಯಮಿತ

೩. ಬೆರಳಚ್ಚಿಸು

೪. ಪರೋಕ್ಷ

೫. ದಿನಚರಿ

**ಅಭ್ಯಾಸ ೫**

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಬ್ಲಾಗ್ ಎಂದರೇನು? ಅದರ ಆರಂಭ ಹೇಗಾಯಿತು?

೨. ಆರ್.ಎಸ್.ಎಸ್. ಸೌಲಭ್ಯದ ಕುರಿತು ಬರೆಯಿರಿ.

೩. ಕನ್ನಡದಲ್ಲಿ ಬ್ಲಾಗ್ ಬಳಕೆ ಬಗ್ಗೆ ಬರೆಯಿರಿ.

೪. ಕನ್ನಡದಲ್ಲಿನ ಬ್ಲಾಗ್ ತಾಣಗಳನ್ನು ಹೆಸರಿಸಿ.

೫. ಅಂಕಣ ಬರಹ ಎಂದರೇನು?

೬. ಅಂಕಣ ಬರಹದ ಗುಣ ವಿಶೇಷಗಳನ್ನು ತಿಳಿಸಿ.

೭. ಅಂಕಣ ಬರಹಕಾರರನ್ನು ಹೆಸರಿಸಿ.

೮. ಪತ್ರಿಕಾ ಸಾಹಿತ್ಯದಲ್ಲಿ ಅಂಕಣ ಬರಹದ ಸ್ಥಾನವೇನು?

## ೧೨.೭. ಸಾರಾಂಶ

**ಅಂತರ್ಜಾಲ**

ಅನೇಕ ಕಂಪ್ಯೂಟರ್ ಜಾಲಗಳ ಅಂತರ್‌ಸಂಪರ್ಕದಿಂದ ರೂಪುಗೊಂಡ ಮಹಾಜಾಲವೇ ಅಂತರ್ಜಾಲ. ಒಂದಕ್ಕಿಂತ ಹೆಚ್ಚು ಕಂಪ್ಯೂಟರ್‌ಗಳನ್ನು ಪರಸ್ಪರ ಸಂಪರ್ಕಿಸಿದ ಜಾಲಗಳನ್ನು (ನೆಟ್‌ವರ್ಕ್) ಕಚೇರಿಗಳಲ್ಲಿ, ವಿದ್ಯಾಸಂಸ್ಥೆಗಳಲ್ಲಿ, ಬ್ಯಾಂಕುಗಳಲ್ಲಿ, ಬಸ್ಸು–ರೈಲು–ವಿಮಾನ ಸಂಸ್ಥೆಗಳಲ್ಲಿ ಬಳಸುವುದನ್ನು ನಾವು ನೋಡಿದ್ದೇವೆ. ಒಂದು ಕಂಪ್ಯೂಟರ್‌ನಿಂದ ಸಾಧ್ಯ ವಾಗುವುದಕ್ಕಿಂತ ಹೆಚ್ಚಿನದನ್ನು ಸಾಧಿಸಿಕೊಳ್ಳಲು ಇಂತಹ ಜಾಲಗಳು ಸಹಾಯ ಮಾಡುತ್ತವೆ. ಇಂತಹ ಹಲವು ಜಾಲಗಳು ಒಟ್ಟು ಸೇರಿದರೆ ಇನ್ನೂ ಹೆಚ್ಚಿನದನ್ನು ಸಾಧಿಸಬಹುದಲ್ಲ ಎಂಬ ಉದ್ದೇಶದಿಂದ ರೂಪುಗೊಂಡದ್ದೇ ಇಂಟರ್‌ನೆಟ್, ಅಂದರೆ ಅಂತರ್ಜಾಲ. ವಿಶ್ವವ್ಯಾಪಿ ಜಾಲಕ್ಕೆ (ವರ್ಲ್ಡ್ ವೈಡ್ ವೆಬ್) ಮೂಲಸೌಕರ್ಯ ಒದಗಿಸುವುದು ಅಂತರ್ಜಾಲದ ಪ್ರಮುಖ ಜವಾಬ್ದಾರಿಯಾಗಿದೆ. ನಾವು ಇದೀಗ ಹಲವಾರು ಬಗೆಯ ಕನ್ನಡ ಜಾಲತಾಣ ಗಳನ್ನು ನೋಡಬಹುದು

**ತಂತ್ರಾಂಶ**

ಪದಸಂಸ್ಕಾರಕವು ಕಡತಗಳ ರಚನೆ, ಸಂಪಾದನೆ, ಪುಟವಿನ್ಯಾಸ ಹಾಗೂ ಮುದ್ರಣದಲ್ಲಿ ನೆರವಾಗುವ ತಂತ್ರಾಂಶ. ಕಂಪ್ಯೂಟರಿನಲ್ಲಿ ಪಠ್ಯವನ್ನು ಟೆಕ್ಸ್ಟ್ / ಟೈಪ್ ಮಾಡಿ, ಪಠ್ಯವನ್ನು ಸುವ್ಯವಸ್ಥಿತಗೊಳಿಸಿ, ಪುಟವಿನ್ಯಾಸಗೊಳಿಸಿ ಮುದ್ರಣವನ್ನು ಪಡೆಯುವ ಕೆಲಸಗಳಿಗೆ ಪದಸಂಸ್ಕರಣೆ ಎಂದು ಕರೆಯಲಾಗಿದೆ. ಪದಸಂಸ್ಕರಣೆಯ ಕೆಲಸದಲ್ಲಿ ನೆರವಾಗುವ ತಂತ್ರಾಂಶಗಳನ್ನು ಪದಸಂಸ್ಕಾರಕಗಳೆಂದು ಕರೆಯುತ್ತಾರೆ. ಪಠ್ಯವನ್ನಷ್ಟೇ ಟೈಪ್ ಮಾಡಿ ಉಳಿಸಿಡಲು ಸಹಾಯ ಮಾಡುವ ನೋಟ್‌ಪ್ಯಾಡ್‌ನಂತಹ ಸರಳ ತಂತ್ರಾಂಶಗಳಿಂದ ಪ್ರಾರಂಭಿಸಿ ಪತ್ರಿಕೆ–ಪುಸ್ತಕಗಳ ವಿನ್ಯಾಸದಲ್ಲಿ ಬಳಕೆಯಾಗುವ ಆಡೋಬ್ ಪೇಜ್ ಮೇಕರ್,

ಇನ್‌ಡಿಸೈನ್‌ನಂತಹ ತಂತ್ರಾಂಶಗಳವರೆಗೆ ವಿವಿಧ ಉದ್ದೇಶಗಳಿಗಾಗಿ ಬೇರೆಬೇರೆ ಪದ ಸಂಸ್ಕಾರಕಗಳನ್ನು ಬಳಸುವುದು ಸಾಮಾನ್ಯ ಅಭ್ಯಾಸವಾಗಿದೆ. ಪದಸಂಸ್ಕರಣದ ಮುಂದುವರೆದ ಸೌಕರ್ಯವೇ ಡಿ.ಟಿ.ಪಿ. (desktop publishing). ಪಠ್ಯದ ಜೊತೆ ಚಿತ್ರಗಳನ್ನು ಸೇರಿಸುವುದು, ಅಕ್ಷರದ ಗಾತ್ರವನ್ನು ಸಾವಿರದೊಂದು ಇಂಚಿನಷ್ಟು ನಿಯಂತ್ರಣೆ ಮಾಡುವುದು, ತಲೆಬರಹ, ಪ್ಯಾರಾಗಳ ನಡುವಿನ ಗಾತ್ರ ಮತ್ತು ಅಂತರ, ಹೀಗೆ ಹಲವು ಸೌಕರ್ಯಗಳು ಇಲ್ಲಿವೆ. ಈಗ ಎಲ್ಲ ಪುಸ್ತಕಗಳು ಇದೇ ವಿಧಾನದಿಂದ ತಯಾರಾಗುತ್ತಿವೆ. ವರ್ಡ್ ಪ್ರೊಸೆಸರ್‌ಗಳಲ್ಲಿ ಅನುಕೂಲಗಳೂ ಇವೆ ಕೆಲವು ಅನಾನುಕೂಲಗಳೂ ಇವೆ.

**ಯುನಿಕೋಡ್**

ಗಣಕೀಕರಣದಲ್ಲಿ ಯುನಿಕೋಡ್ ಎಂದರೆ ಒಂದು ಅಂತರರಾಷ್ಟ್ರೀಯ ನಿರ್ದಿಷ್ಟಮಾನ. ಯುನಿಕೋಡ್ ಎನ್ನುವುದು ಇಂಗ್ಲಿಷ್ ಸೇರಿದಂತೆ ಬಹುತೇಕ ಎಲ್ಲಾ ವಿಶ್ವ ಭಾಷೆಗಳನ್ನು ಕಂಪ್ಯೂಟರ್‌ನಲ್ಲಿ ಗೊಂದಲವಿಲ್ಲದೆ ಪ್ರತಿನಿಧಿಸುವ, ಬಳಸಲು ಸಾಧ್ಯವಾಗಿಸುವ ಒಂದು 'ಎನ್ಕೋಡಿಂಗ್' ಸ್ಟ್ಯಾಂಡರ್ಡ್. ಯುನಿಕೋಡ್ ಎಂಬುದು ವಿಶ್ವಸಂಕೇತ. ಯುನಿಕೋಡ್ ಆಧಾರಿತ ತಂತ್ರಾಂಶಗಳಲ್ಲಿ ಬೆರಳಚ್ಚು ಮಾಡಿದ ಮಾಹಿತಿಯನ್ನು ನೇರವಾಗಿ ಮಾಹಿತಿ ಶೇಖರಣೆಯ ಸಂಕೇತವಾದ ಯುನಿಕೋಡ್‌ನಲ್ಲೇ ಸಂಗ್ರಹಿಸಿಡಲಾಗುತ್ತದೆ.

ಪ್ರಪಂಚದ ಪ್ರತಿ ಭಾಷೆಯ ಪ್ರತಿಯೊಂದು ಅಕ್ಷರಕ್ಕೂ ತನ್ನದೇ ಆದ ಪ್ರತ್ಯೇಕ ಸಂಕೇತ ಇರಬೇಕು. ಈ ಎಲ್ಲ ಬೇಕುಗಳಿಗೆ ಉತ್ತರವೇ ಯುನಿಕೋಡ್. ಯುನಿಕೋಡ್‌ನಲ್ಲಿ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಶ್ರೇಣಿ ಇದೆ. ಇದು ಭಾರತೀಯ ಭಾಷೆಗಳಿಗೂ ಅನ್ವಯಿಸುತ್ತದೆ. ಯುನಿಕೋಡ್ ವಿಧಾನದಲ್ಲಿ ಮಾಹಿತಿ ಸಂಗ್ರಹಣೆ ಮಾಡಿದರೆ ಒಂದೇ ಕಡತದಲ್ಲಿ ಪ್ರಪಂಚದ ಎಲ್ಲ ಭಾಷೆಗಳಲ್ಲಿ ಮಾಹಿತಿಯನ್ನು ಶೇಖರಣೆ ಮಾಡಲು ಸಾಧ್ಯ. ಯುನಿಕೋಡ್‌ನಲ್ಲಿ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಗಳಿರುವುದು ಮಾತ್ರವಲ್ಲ, ಪ್ರತಿ ಭಾಷೆಗೂ ತನ್ನದೇ ಆದ ಅಕಾರಾದಿ ವಿಂಗಡಣೆಯ ಸೂತ್ರವೂ ಯುನಿಕೋಡ್‌ನಲ್ಲಿದೆ.

**ಸಂವಹನ ಮತ್ತು ಸಾಮಾಜಿಕ ಮಾಧ್ಯಮ**

ಸಂವಹನ ಎಂಬ ಪದವು ಇಂಗ್ಲಿಷ್‌ನ ಕಮ್ಯುನಿಕೇಷನ್ ಎಂಬ ಪದಕ್ಕೆ ಸಮಾನ ಅರ್ಥವನ್ನು ನೀಡುವ ಕನ್ನಡದ ಪದವಾಗಿದೆ. ಕಮ್ಯುನಿಕೇಷನ್ ಪದದ ಮೂಲ ಲ್ಯಾಟಿನ್ ಭಾಷೆಯಲ್ಲಿದ್ದು, ಕಮ್ಯುನಿಕೇರ್ ಎಂಬ ಲ್ಯಾಟಿನ್ ಪದದಿಂದ ಉತ್ಪತ್ತಿಯಾಗಿರುತ್ತದೆ. ಹಂಚಿಕೊ ಎಂಬ ಅರ್ಥವನ್ನು ನೀಡುವ ಲ್ಯಾಟಿನ್ ಭಾಷೆಯ ಕಮ್ಯುನಿಕೇರ್ ಪದವು ನಾವು ಕನ್ನಡದಲ್ಲಿ ಬಳಸುವ ಸಂವಹನ ಪದದ ಅರ್ಥಕ್ಕೆ ಸಮಾನಾಂತರ ಅರ್ಥವನ್ನು ಹೊಂದಿರುತ್ತದೆ. ಕನಿಷ್ಠ ಇಬ್ಬರು ಭಾಗವಹಿಸುವವರನ್ನು ಒಳಗೊಂಡ ಸಾಮಾಜಿಕ ಕ್ರಿಯೆಯನ್ನು ಸಂವಹನ ಎಂದು ಕರೆಯಲಾಗುತ್ತದೆ. ವರ್ಚುವಲ್ ಸಮುದಾಯಗಳು ಮತ್ತು ನೆಟ್‌ವರ್ಕ್‌ಗಳಲ್ಲಿ ಜನರು ಮಾಹಿತಿ ಮತ್ತು ಆಲೋಚನೆಗಳನ್ನು ರಚಿಸುವ, ಹಂಚಿಕೊಳ್ಳುವ ಅಥವಾ ವಿನಿಮಯ ಮಾಡುವ ಸಾಮಾಜಿಕ ಸಂವಹನ. ಸಾಮಾಜಿಕ ಸಂವಹನವು ಸಾಮಾಜಿಕ ವ್ಯಸನವನ್ನು ಆಧರಿಸಿದೆ. ಸಾಮಾಜಿಕ ಸಂವಹನವು ಸಾಮಾಜಿಕ ಸಂಪರ್ಕದ ಪ್ರಕಾರಗಳಲ್ಲಿ ಒಂದಾಗಿದೆ. ಎರಡು ಅಥವಾ ಹೆಚ್ಚಿನ ವ್ಯಕ್ತಿಗಳ ನಡುವೆ ಸಾಮಾಜಿಕ ಕ್ರಿಯೆಗಳ ವಿನಿಮಯದ ಪರಸ್ಪರ ನಿರ್ದೇಶನದ ಪ್ರಕ್ರಿಯೆಯೂ ಆಗಿದೆ.

ಸಾಮಾಜಿಕ ಮಾಧ್ಯಮವು ವೆಬ್-ಆಧಾರಿತ ಸಂವಹನ ಸಾಧನವಾಗಿದ್ದು, ಜನರು ಪರಸ್ಪರ ಹಂಚಿಕೊಳ್ಳುವ ಮತ್ತು ಸೇವಿಸುವ ಮಾಹಿತಿಯ ಮೂಲಕ ಪರಸ್ಪರ ಸಂವಹನ

ನಡೆಸಲು ಸಾಧ್ಯವಾಗುತ್ತದೆ. ಸರಿಯಾದ ಸಮಯದಲ್ಲಿ ಮಹತ್ವದ ವಿಷಯಗಳನ್ನು ಜನರಿಗೆ ಮುಟ್ಟಿಸುವ ಕೆಲಸವನ್ನು ಸಾಮಾಜಿಕ ಮಾಧ್ಯಮಗಳು ಮಾಡುತ್ತಿದೆ. ಜನರ ಕಷ್ಟಗಳಿಗೆ ಸ್ಪಂದಿಸಿ ಆದಷ್ಟು ಜನರ ಹಿತವನ್ನು ಬಯಸುತ್ತಾ ಸಹಾಯ ಮಾಡುತ್ತಾ ಬಂದಿದೆ. ವಿಶ್ವದಾದ್ಯಂತ ಯಾವುದೇ ಮೂಲೆಯಲ್ಲಿರುವ ತಮ್ಮ ಸಂಬಂಧಿಕರೊಡನೆ ಅಥವಾ ಸ್ನೇಹಿತರೊಡನೆ ಸಂವಹನ ನಡೆಸುವ ಒಂದು ವಿಶೇಷ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಪ್ರತಿ ವರ್ಷ ಜೂನ್ ೩೦ನೆಯ ತಾರೀಕಿನಂದು ವಿಶ್ವ ಸಾಮಾಜಿಕ ಮಾಧ್ಯಮ ದಿನವನ್ನು ಆಚರಿಸಲಾಗುತ್ತದೆ. ವಿಶ್ವದ ಯಾವುದೇ ಮೂಲೆಯಲ್ಲಿ ನಡೆದ ಘಟನೆಯನ್ನು ಕುಳಿತಲ್ಲಿಯೇ ತಿಳಿಸುವ ಸಾಮಾಜಿಕ ಮಾಧ್ಯಮದ ಮಹತ್ವ. ಇದು ನಮ್ಮ ಕಾಲದ ಒಂದು ದೊಡ್ಡ ಆಧುನಿಕ ವಿದ್ಯಮಾನವಾಗಿದೆ.

### ಬ್ಲಾಗ್

ಇತ್ತೀಚೆಗಿನ ದಿನಗಳಲ್ಲಿ ತುಂಬ ಎಲ್ಲರ ಬಾಯಲ್ಲೂ ಕೇಳಿಬರುತ್ತಿರುವ ಪದ 'ಬ್ಲಾಗ್'. ಅದರ ಹಲವು ಪ್ರತ್ಯಯಗಳೇ ಬ್ಲಾಗಿಂಗ್, ಬ್ಲಾಗರ್, ಇತ್ಯಾದಿ. ಪವನಜರ ಮಾತಿನಲ್ಲಿ ಹೇಳುವುದಾದರೆ – ಬ್ಲಾಗ್ ಎಂದರೆ ಒಂದು ರೀತಿಯಲ್ಲಿ ಸಾರ್ವಜನಿಕ ಸ್ವಗತ ಎನ್ನಬಹುದು. ಎಲ್ಲರಿಗೂ ಓದಲು ಅನುಕೂಲವಾಗುವಂತೆ ಅಂತರ್ಜಾಲದಲ್ಲಿ ಇಟ್ಟಂತಹ ತೆರೆದ ದಿನಚರಿ ಅಥವಾ ಡೈರಿ ಎಂದೂ ಕರೆಯಬಹುದು. ಬ್ಲಾಗ್‌ನ ಕ್ರಿಯಾರೂಪವೇ ಬ್ಲಾಗಿಂಗ್ ಅಂದರೆ ಬ್ಲಾಗ್ ನಡೆಸುವ ಕ್ರಿಯೆ. ಬ್ಲಾಗರ್ ಎಂದರೆ ಬ್ಲಾಗ್ ಬರೆಯುವ ವ್ಯಕ್ತಿ. ಬ್ಲಾಗ್ ಎಂಬ ಹೆಸರು ವೆಬ್ ಲಾಗ್ ಎಂಬುದರ ಅಪಭ್ರಂಶ. ಇವನ್ನು ಜಾಲತಾಣಗಳೆಂದು ಕರೆಯುವುದಕ್ಕಿಂತ ಆನ್‌ಲೈನ್ ದಿನಚರಿಗಳೆಂದು ಕರೆಯುವುದೇ ಸೂಕ್ತ. ಬ್ಲಾಗ್‌ನಲ್ಲಿ ಸೇರಿಸಲ್ಪಡುವ ಲೇಖನಕ್ಕೆ ಪೋಸ್ಟ್ ಅಥವಾ ಪೋಸ್ಟಿಂಗ್ ಎನ್ನುತ್ತಾರೆ. ಈ ಪೋಸ್ಟಿಂಗ್‌ಗೆ ಒಂದು ಶೀರ್ಷಿಕೆ, ಸೇರಿಸಿದ ದಿನಾಂಕ, ಮುಖ್ಯ ಬರಹ ಅಥವಾ ಲೇಖನ, ವಿಷಯ ಇತ್ಯಾದಿ ಲಕ್ಷಣಗಳಿರುತ್ತವೆ ಈ ಪೋಸ್ಟಿಂಗ್‌ನ ಕೆಳಗೆ ಓದುಗರು ತಮ್ಮ ಟೀಕೆ ಟಿಪ್ಪಣಿಗಳನ್ನು ಸೇರಿಸುವ ಸೌಲಭ್ಯವಿದೆ.

ಯು.ಬಿ. ಪವನಜ, ಹರಿಪ್ರಸಾದ್ ನಾಡಿಗ್, ಪಿ.ಎಂ. ಕೃಷ್ಣರಾಜ್, ಎಂ.ಎಸ್. ಶ್ರೀರಾಮ್, ಶೇಷಾದ್ರಿ, ಸತೀಶ್ ಕುಮಾರ್ ಮುಂತಾದ ಅನೇಕರು ಕನ್ನಡದಲ್ಲಿ ಬ್ಲಾಗಿಸಲು ಪ್ರಾರಂಭಿಸಿದರು. ಹರಿಪ್ರಸಾದ್ ನಾಡಿಗ್ ೨೦೦೫ರಲ್ಲಿ ಸಂಪದ ಎಂಬ ಸಮುದಾಯತಾಣವನ್ನು ಪ್ರಾರಂಭಿಸಿದ ಮೇಲೆ ಕನ್ನಡ ಬ್ಲಾಗುಗಳಿಗೊಂದು ಪ್ರಭಾವಶಾಲಿ ವೇದಿಕೆಯೂ ದೊರೆಯಿತು.

### ಅಂಕಣ ಬರಹ

ಇದೊಂದು ವಿಶಿಷ್ಟ ಬಗೆಯ ಪತ್ರಿಕಾಸಾಹಿತ್ಯ. ಪತ್ರಿಕೆಗಳಲ್ಲಿ ನಿಯತವಾಗಿ ಬರೆಯುವ ನಿರ್ದಿಷ್ಟ ಲೇಖನಕ್ಕೆ ಅಂಕಣ ಬರಹವೆಂದು ಹೆಸರು. ಕನ್ನಡದಲ್ಲಿ ಅಂಕಣ ಹಾಗೂ ಅಂಕಣ ಸಾಹಿತ್ಯದ ಪರಿಕಲ್ಪನೆ ಇಂಗ್ಲಿಷ್ ಪತ್ರಿಕೋದ್ಯಮದಿಂದ ಬಂದಿದ್ದು. ಅಂಕಣವು ದಿನಪತ್ರಿಕೆ, ನಿಯತಕಾಲಿಕ ಅಥವಾ ಇತರ ಪ್ರಕಟಣೆಯಲ್ಲಿನ ಒಂದು ಪುನರಾವರ್ತಕ ವಿಭಾಗ ಅಥವಾ ಲೇಖನವಾಗಿರುತ್ತದೆ. ಇಂಗ್ಲಿಷಿನ ಕಾಲಂ ಎಂಬ ಪದ ಹಾಗೂ ಪರಿಕಲ್ಪನೆಗೆ ಸಂವಾದಿಯಾಗಿ ಕನ್ನಡದಲ್ಲಿ ಅಂಕಣ ಎಂಬ ಪದ ಬಳಕೆಯಾಗುತ್ತಿದೆ. ಯಾವುದೇ ವಸ್ತು ವಿಷಯವನ್ನು ಕುರಿತು ಒಂದು ನಿರ್ದಿಷ್ಟ ಪತ್ರಿಕೆ ಅಥವಾ ನಿಯತಕಾಲಿಕೆಗೆ ತಮ್ಮ ವೈಯಕ್ತಿಕ ಚಿಂತನೆಯನ್ನು ಸೇರಿಸಿ ನಿಯತವಾಗಿ ಬರೆಯುವವನೇ ಅಂಕಣಕಾರ. ಅಂಕಣ ಬರಹದಲ್ಲಿ ಅಂಕಣಕಾರ ಸಮಕಾಲೀನ ವಸ್ತು ವಿಷಯಗಳಿಗೆ ಸ್ವಂತಿಕೆಯ ಲೇಪ ಹಾಗೂ ಛಾಪನ್ನು ನೀಡಬೇಕಾಗುತ್ತದೆ. – ಇದು ಅಂಕಣ ಬರಹದ ಒಂದು ಮುಖ್ಯ ಲಕ್ಷಣವಾಗಿದೆ.

ಅಂಕಣ ಬರಹಕ್ಕೆ ಸಮಕಾಲೀನ ಸಮಾಜದ ಯಾವ ಮುಖವಾದರೂ ವಸ್ತುವಾಗ ಬಹುದು. ಹೆಚ್ಚಿನ ಅಂಕಣ ಬರಹಗಳು ಸಮಕಾಲೀನ ರಾಜಕೀಯ ವಿದ್ಯಾಮಾನಗಳನ್ನು ಕುರಿತಿರುತ್ತವೆ. ಸಾಹಿತ್ಯಕ ಪ್ರಸ್ತಾಪವುಳ್ಳ ಅಂಕಣಗಳು ಕನ್ನಡದಲ್ಲಿ ವಿರಳ. ವಿಜ್ಞಾನ, ಸಂಗೀತ, ಕಲೆ, ಶಿಕ್ಷಣ, ವೈದ್ಯಕೀಯ, ಕ್ರೀಡೆ ಮುಂತಾದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಂಕಣಗಳು ದುರ್ಲಭವೇನಲ್ಲ. ಈಗೀಗ ಲಘು ಹರಟೆಗಳೂ ಅಂಕಣ ಬರೆಹದಲ್ಲಿ ಸ್ಥಾನ ಪಡೆದಿವೆ. ಸಾಹಿತ್ಯ ವಿಚಾರ ಪ್ರಧಾನವಾದ ಅಂಕಣಗಳಲ್ಲಿ ಸಾಮಾನ್ಯವಾಗಿ ವ್ಯಕ್ತಿ, ಕೃತಿ, ಸಂಸ್ಕೃತಿ, ಶಿಕ್ಷಣ ಹಾಗೂ ಕಲೆಗಳನ್ನು ಕುರಿತ ಚಿಂತನೆ ಇರುತ್ತದೆ. ಅಂಕಣ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಬಗೆಯ ಗದ್ಯವಿರುತ್ತದೆ.

## ೧೨.೭. ಮುಂದಿನ ಓದಿಗಾಗಿ ಮತ್ತು ಆಕರ ಗ್ರಂಥಗಳು

ಕನ್ನಡದಲ್ಲಿ ಗಣಕ ಯಂತ್ರಗಳ ಅಳವಡಿಕೆ ಮತ್ತು ಬಳಕೆಗೆ ಸಂಬಂಧಿಸಿದಂತೆ ಈ ಪಠ್ಯವನ್ನು ಸಿದ್ಧಪಡಿಸುವಲ್ಲಿ ಡಿಜಿಟಲ್ ಕನ್ನಡ 'ವಾರ್ತಾ ಭಾರತಿ' ಪತ್ರಿಕೆಯಲ್ಲಿ ಪ್ರಕಟವಾದ ಎ. ಸತ್ಯನಾರಾಯಣ ಅವರ ಅಂಕಣ ಬರಹಗಳು, ಕನ್ನಡ ತಂತ್ರಜ್ಞಾನದ ಲೇಖಕ ಟಿ.ಜಿ. ಶ್ರೀನಿಧಿ ಅವರ ಕಂಪ್ಯೂಟರ್ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ 'ನುಡಿಯ ನಾಳೆಗಳು', 'ಕಂಪ್ಯೂಟರ್ ತಂತ್ರಜ್ಞಾನ ಪದವಿವರಣ ಕೋಶ', 'ಕನ್ನಡ ತಂತ್ರಜ್ಞಾನ ನೆನ್ನೆ–ಇಂದು–ನಾಳೆ' ಕೃತಿಗಳು, ಡಾ. ಯು.ಬಿ. ಪವನಜರವರ 'ವಿಶ್ವಕನ್ನಡ' http://vishvakannada.com ಜಾಲತಾಣ ದಲ್ಲಿ ಲಭ್ಯವಿರುವ ಲೇಖನಗಳು, ವಿವಿಧ ಲೇಖಕರ ಕಂಪ್ಯೂಟರ್ ಮತ್ತು ಕನ್ನಡ ಕೃತಿಗಳು ಹಾಗೂ ಕನ್ನಡದ ಸ್ವತಂತ್ರ (ಮುಕ್ತ) ತಂತ್ರಾಂಶಗಳ ಕುರಿತಾದ ಓಂ ಶಿವಪ್ರಕಾಶ್ ಅವರ ಲೇಖನಗಳಿಗೆ ಉಪಕೃತನಾಗಿದ್ದೇನೆ.

೧. 'ಭಾಷಾತಂತ್ರಜ್ಞಾನ' (ಸಂ.), ಸಾಂಬಮೂರ್ತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨. 'ಆಡಳಿತ ಕನ್ನಡ' (ಪ್ರ.ಸಂ.), ಎ. ಮುರಿಗೆಪ್ಪ ಮತ್ತು ಮುಖ್ಯಮಂತ್ರಿ ಚಂದ್ರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
೩. 'ಕಂಪ್ಯೂಟರ್ ಪದ ವಿವರಣ ಕೋಶ' (ಸಂ.), ಕೆ. ಚಿದಾನಂದ ಗೌಡ ಮತ್ತು ಜಿ.ವಿ. ಶ್ರೀನಾಥಶಾಸ್ತ್ರೀ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
೪. 'ಕಂಪ್ಯೂಟರ್ ಪ್ರಪಂಚ', ಟಿ.ಜಿ. ಶ್ರೀನಿಧಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
೫. 'ಕನ್ನಡ ತಂತ್ರಜ್ಞಾನ ನೆನ್ನೆ–ಇಂದು–ನಾಳೆ', ಟಿ.ಜಿ. ಶ್ರೀನಿಧಿ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೭.
೬. 'ಕಂಪ್ಯೂಟರ್ ಮತ್ತು ಕನ್ನಡ', ಎ. ಸತ್ಯನಾರಾಯಣ, ಬೇಳೂರು ಸುದರ್ಶನ, ಟಿ.ಜಿ. ಶ್ರೀನಿಧಿ, ಓಂ ಶಿವಪ್ರಕಾಶ್ ಮತ್ತು ಯು.ಬಿ. ಪವನಜ, ಮಿತ್ರ ಮಾಧ್ಯಮ, ಬೆಂಗಳೂರು, ೨೦೧೪.
೫. ಅಂತರ್ಜಾಲದಲ್ಲಿ ದೊರೆಯುವ ಯು.ಬಿ. ಪವನಜ ಅವರ ಲೇಖನಗಳು.

ಪಠ್ಯವನ್ನು ಸಿದ್ಧಪಡಿಸಿದವರು: **ಡಾ. ಸಿ. ನಾಗಭೂಷಣ**